ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಸೆಪ್ಟೆಂಬರ್ 25, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 133 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

# ಭೂ ಸ್ವಾಧೀನ ಕಾನೂನು ಬದಲಾಗಲಿ

### ಜಮೀನು ವಶಪಡಿಸಿಕೊಂಡರೂ ರೈತನೇ ಖಾಯಂ ಮಾಲೀಕನಾಗಿರಲಿ: ತರಳಬಾಳು ಶ್ರೀ



ಸಿರಿಗೆರೆಯಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ 'ಕೋರ್ಟಿನ ಕಟಕಟೆಯಲ್ಲಿ ಜಂಗಮ' ಕೃತಿ ಲೋಕಾರ್ಪಣೆ ಮಾಡಲಾಯಿತು.

ಸಿರಿಗೆರೆ, ಸೆ.24- ಭೂ ಸ್ವಾಧೀನದ ಕಾನೂನಿನಡಿ ರೈತರೇ ಭೂಮಿಯ ಖಾಯಂ ಮಾಲೀಕನಾಗಬೇಕು. ರೈತರು ಮತ್ತು ಉದ್ದಿಮೆದಾರ ಮಧ್ಯೆ ಹೊಸ ಕಾನೂನು ಜಾರಿಗೆ ತರಬೇಕಾಗಿದೆ ಎಂದು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳವರು ಅಭಿಪ್ರಾಯಪಟ್ಟರು.

ಭಾನುವಾರ ಜರುಗಿದ ಲಿಂ. ಶಿವಕುಮಾರ ಸ್ವಾಮೀಜಿಯವರ 31ನೇ ಶ್ರದ್ಧಾಂಜಲಿ ಸಮಾರಂಭದಲ್ಲಿ ದಿವ್ಯಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಉದ್ಯಮ ಸ್ಥಾಪಿಸುವವರಿಗೆ ರೈತರ ಜಮೀನು ಬೇಕಿದ್ದರೆ, ರೈತ ಉಳಿಮೆ ಮಾಡುತ್ತಿದ್ದಾಗ ಸಿಗುವ ಆದಾಯಕ್ಕಿಂತ ಹೆಚ್ಚು ಆದಾಯವನ್ನು ನಿರಂತರವಾಗಿ ರೈತನಿಗೆ ನೀಡಬೇಕು. ಒಮ್ಮೆಲೇ ಇಡಿ ಗಂಟು ಕೊಟ್ಟು ರೈತರನ್ನು ಬಿಕಾರಿಯನ್ನಾಗಿ ಮಾಡಬಾರದು ಎಂಬುದು ನಮ್ಮ ಒತ್ತಾಸೆಯಾಗಿದೆ ಎಂದು ಶ್ರೀಗಳು ನುಡಿದರು.

ರೈತರ ಜಮೀನು ವಶಪಡಿಸಿಕೊಂಡು ಮತ್ತೊಬ್ಬರಿಗೆ ನೀಡಿ ಲಾಭ ಮಾಡಿಕೊಳ್ಳುವ ಘಟನೆಗಳು ನಡೆಯುತ್ತವೆ. ಈ ಹಿನ್ನೆಲೆಯಲ್ಲಿ ಈಗಾಗಲೇ ವಶಪಡಿಸಿಕೊಂಡಿರುವ ರೈತರ ಜಮೀನು ಯಾವ ಉದ್ದೇಶಕ್ಕಾಗಿ ಬಳಕೆಯಾಗಿವೆ ಎಂದು ತನಿಖೆ ನಡೆಸುವ ಅಗತ್ಯವಿದೆ ಎಂದು ಹೇಳಿದರು.

ಕಾವೇರಿ ವಾದಕ್ಕೆ ಸಂಬಂಧಿಸಿದಂತೆ ಮಾತನಾಡಿದ ಶ್ರೀಗಳು, ಕಾವೇರಿ ವಿವಾದ ಬಹಳಷ್ಟು ವರ್ಷಗಳಿಂದಲೂ ಇದೆ. ಇದಕ್ಕೆ ಖಾಯಂ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ, ತಮಿಳು ನಾಡು ಸೇರಿದಂತೆ ಎಲ್ಲಾ ರಾಜ್ಯ ಸರ್ಕಾರಗಳು ಹೊಸ ಚಿಂತನೆ ಮಾಡಬೇಕಿದೆ ಎಂದರು.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆ ಯಲ್ಲಿ ಮಹಿಳೆಯರಿಗೆ 2 ಸಾವಿರದ ಬದಲು 4 ಸಾವಿರ ರೂ ನೀಡಿದರೂ ತಪ್ಪಿಲ್ಲ. ಆದರೆ ಆ ಹಣವನ್ನು ಪುರುಷರು ಮದ್ಯ ಸೇವನೆಗೆ ಬಳಕೆ ಮಾಡದಂತೆ ನೋಡಿಕೊಳ್ಳಬೇಕು. ಯುವನಿಧಿ ಯೋಜನೆಯಲ್ಲಿ ಯುವಕರಿಗೆ ಹಣ ನೀಡುವ ಜೊತೆಗೆ ಯುವಕರನ್ನು ದೇಶದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು ಎಂದು ಶ್ರೀಗಳು ಸಲಹೆ ನೀಡಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಸರ್ಕಾರದಿಂದ ಆಗುವ ಕೆಲಸಗಳನ್ನು ಸಿರಿಗೆರೆ ಶ್ರೀಮಠ (4ನೇ ಪುಟಕ್ಕೆ)

## ರೈತನ ಗಟ್ಟಿ ಮಾಡಿದರೆ ಕೃಷಿ ಗಟ್ಟಿ: ಬೊಮ್ಮಾಯಿ

ಸಿರಿಗೆರೆ, ಸೆ.24- ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ರೈತನನ್ನು ಗಟ್ಟಿ ಮಾಡಿದರೆ ಕೃಷಿ ಗಟ್ಟಿಯಾಗುತ್ತದೆ. ಕೃಷಿ ಯೋಜನೆಗಳು, ಪಾಲಿಸಿಗಳು ರೈತ ಕೇಂದ್ರಿತವಾಗಬೇಕು ಎಂದು ಹೇಳಿದರು.

ಭಾನುವಾರ ಜರುಗಿದ ಲಿಂ. ಶಿವಕುಮಾರ ಸ್ವಾಮೀಜಿಯವರ 31ನೇ ಶ್ರದ್ಧಾಂಜಲಿ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ನಾವು ರೈತರನ್ನು ನೋಡುವ ರೀತಿ ಬದಲಾಗಬೇಕಿದೆ. ರೈತನ ಹಾಗೂ ಅವರ ವೃತ್ತಿಯನ್ನು ಗೌರವಯುತವಾಗಿ ಕಂಡಾಗ ರೈತ ಸಮಸ್ಯೆಗಳಿಗೆ ಪರಿಹಾರ ತಾನಾಗಿಯೇ ಸಿಗುತ್ತದೆ ಎಂದು ಅಭಿಪ್ರಾಯಿಸಿದರು.

ಎಲ್ಲರನ್ನೂ ಮೆಚ್ಚಿಸಲು ಪ್ರಯತ್ನಿಸುತ್ತೇವೆ. ಆದರೆ ಯಾರನ್ನೂ ಮೆಚ್ಚಿಸಲು ಸಾಧ್ಯವಾಗು ವುದಿಲ್ಲ. ನಾವು ಸನ್ಮಾರ್ಗದಲ್ಲಿ ನಡೆದರೆ ಯಾರ ನ್ನೂ ಮೆಚ್ಚಿಸುವ ಅಗತ್ಯವಿಲ್ಲ (4ನೇ ಪುಟಕ್ಕೆ)

# ಸಮಾಜ ಕಟ್ಟುವವರ ಸಂಖ್ಯೆ ಹೆಚ್ಚಾಗಲಿ

### ಹೊನ್ನಾಳಿಯಲ್ಲಿ ರಾಜ್ಯಮಟ್ಟದ ಪಂಚಮಸಾಲಿ ಕಾರ್ಯಕಾರಿಣಿಯಲ್ಲಿ ವಚನಾನಂದ ಶ್ರೀ



ಹೊನ್ನಾಳಿ, ಸೆ. 24 - ಪಂಚಮಸಾಲಿ ಸಮಾಜದ ಬಂಧುಗಳಲ್ಲಿನ ಒಳ ಜಗಳ ಹಚ್ಚುವವರು ಕಮ್ಮಿಯಾಗಲಿ, ದ್ವೇಷಬಿಟ್ಟು ಸಮಾಜ ಕಟ್ಟಬೇಕು ಎಂಬ ನಿಟ್ಟಿನಲ್ಲಿ ಸಮಾಜದ ಬಂಧುಗಳು ಚಿಂತನ-ಮಂಥನ ನಡೆಸುವ ಮೂಲಕ ಪಂಚಮಸಾಲಿ ಸಮಾಜದ ಬಡಜನತೆಗೆ ಅನುಕೂಲವಾಗುವ ಕಾರ್ಯಗಳ ಹಮ್ಮಿಕೊಳ್ಳಬಹುದಾದ ಯೋಜನೆಗಳ ಸುದೀರ್ಘ ಚರ್ಚೆಗಳನ್ನು ನಡೆಸಲಾಗಿದೆ ಎಂದು ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಸ್ವಾಮೀಜಿ ಹೇಳಿದರು.

ಅವರು ಹೊನ್ನಾಳಿ ಹಿರೇಕಲ್ಮಠದ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪಂಚಮಸಾಲಿ ಸಮಾಜದ ಸರ್ವಸದಸ್ಯರ ಸಭೆಯ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಹಿಂದಿನ ದಿನ ಹೊನ್ನಾಳಿಯ ಭಕ್ತರೊಬ್ಬರ ಮನೆಯಲ್ಲಿ ಸಮಾಜದ ಸುಮಾರು 50ಕ್ಕೂ ಹೆಚ್ಚು ಮುಖಂಡರೊಂದಿಗೆ ಸುದೀರ್ಘವಾಗಿ ಸಂಜೆ 5 ರಿಂದ ರಾತ್ರಿ 11 ಗಂಟೆಯವರೆಗೂ ಚರ್ಚೆಗಳು ನಡೆದು ಒಮ್ಮತದೊಂದಿಗೆ ಒಗ್ಗಟ್ಟಿನ ಹಾಗೂ ಸಾಮರಸ್ಯದ ಮೂಲಕ ಸಮಾಜದ ಸಂಘಟನೆ ಹಾಗೂ ಬಲವರ್ಧನೆ ಕಾರ್ಯ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಹೊನ್ನಾಳಿಯ ಡಾ. ರಾಜಕುಮಾರ ಅವರನ್ನು ಹರಿಹರ ಪೀಠದ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುವಂತೆ ಸಭೆಯಲ್ಲಿ ಶ್ರೀಗಳು ಘೋಷಿಸಿದರು.

ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಜಿ.ಪಿ. ಪಾಟೀಲ್ ಅವರು ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ರಾಜ್ಯದ ವಿವಿಧ ತಾಲ್ಲೂಕುಗಳಿಂದ ಬಂದಿರುವ ಅಧ್ಯಕ್ಷರ ಅನೇಕ ಅಭಿಪ್ರಾಯಗಳ ಕಾರ್ಯ ಯೋಜನೆಗೆ (4ನೇ ಪುಟಕ್ಕೆ)

## 2034ರವರೆಗೆ ಮಹಿಳೆಯರಿಗೆ ಮೀಸಲಾತಿ ಸಿಗದು : ಸಿಬಾಲ್



ನವದೆಹಲಿ, ಸೆ. 24 – 2034ರ ಲೋಕಸಭಾ ಚುನಾವಣೆ ವೇಳೆ ಮಾತ್ರ ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮೀಸಲಾತಿ ಸೌಲಭ್ಯ ಸಿಗಲು ಸಾಧ್ಯ ಎಂದು ಮಾಜಿ ಕಾನೂನು ಸಚಿವ ಕಪಿಲ್ ಸಿಬಾಲ್ ಪ್ರತಿಪಾದಿಸಿದ್ದಾರೆ.

ಸಂವಾದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಸರ್ಕಾರ ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ಗಂಭೀರವಾಗಿದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತಿದೆ. ಅವರು ಈ ವಿಷಯದ ಬಗ್ಗೆ ನೈಜವಾಗಿದ್ದಿದ್ದರೆ 2014ರಲ್ಲೇ ಮೀಸಲಾತಿ ಮಸೂದೆ ಜಾರಿಗೆ ತರಬಹುದಿತ್ತು ಎಂದರು.

ಮಹಿಳಾ ಮೀಸಲಾತಿ 2029ರಲ್ಲೂ ಜಾರಿಗೆ ಬರುವುದಿಲ್ಲ. ಈ ಹಿಂದೆ 1976ರಲ್ಲಿ ಕ್ಷೇತ್ರ ಪುನರ್ವಿಂಗಡಣೆಯಾಗಿತ್ತು. ಸಂವಿಧಾನಕ್ಕೆ 84ನೇ ತಿದ್ದುಪಡಿ ತರುವ ಮೂಲಕ 2026ರವರೆಗೆ ಕ್ಷೇತ್ರ ಪುನರ್ವಿಂಗಡಣೆ ತಡೆಯಲಾಗಿತ್ತು. 2026ರಲ್ಲಿ ಜನಗಣತಿ ಆರಂಭಿಸಿದರೆ ಅದಕ್ಕೆ ಒಂದೂವರೆ ವರ್ಷ ಬೇಕಾಗಲಿದೆ ಎಂದು ಸಿಬಾಲ್ ತಿಳಿಸಿದರು.

ಅಲ್ಲದೇ ಉತ್ತರ ಭಾರತದ ಬಹುತೇಕರು ಜಾತಿ (4ನೇ ಪುಟಕ್ಕೆ)

ಚಿರಸ್ಮರಣೆ



ದಿ|| ದೊಗ್ಗಳ್ಳಿ ಮಲ್ಲಿಕಾರ್ಜುನಪ್ಪ

ನೀವು ನಮ್ಮನ್ನಗಲಿ ಇಂದಿಗೆ ಹತ್ತೊಂಬತ್ತು ವರ್ಷಗಳು ಕಳೆದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಪತ್ನಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು.
ದಾವಣಗೆರೆ.

## ಇಂದು ದಾವಣಗೆರೆ ಬಂದ್‌ಗೆ ಕರೆ

### ಬಲವಂತ ಬಂದ್‌ಗೆ ಕ್ರಮ ಎಸ್ಪಿ ಉಮಾ ಎಚ್ಚರಿಕೆ

ದಾವಣಗೆರೆ, ಸೆ.24- ಭದ್ರಾ ನಾಲೆಗೆ ನೀರು ಹರಿಸಲು ಒತ್ತಾಯಿಸಿ ಭಾರತೀಯ ರೈತ ಒಕ್ಕೂಟ ದಾವಣಗೆರೆ ಬಂದ್‌ಗೆ ಕರೆ ನೀಡಿದ್ದು, ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ ಕಾಪಾಡುವ ನಿಟ್ಟಿನಲ್ಲಿ ಬಂದ್ ಕರೆ ನೀಡಿದ ಆಯೋಜಕರು ಸೂಚನೆಗಳನ್ನು ಪಾಲಿಸುವಂತೆ ಎಸ್ಪಿ ಉಮಾ ಪ್ರಶಾಂತ್ ಹೇಳಿದ್ದಾರೆ.

ಒತ್ತಾಯಪೂರ್ವಕ ಅಥವಾ ಬಲವಂತವಾಗಿ (3ನೇ ಪುಟಕ್ಕೆ)

## ಆರ್ಥಿಕತೆಯ ಎಲ್ಲೆಡೆ ಅವ್ಯವಸ್ಥೆ : ಕಾಂಗ್ರೆಸ್

ನವದೆಹಲಿ, ಸೆ. 24 – ಆರ್ಥಿಕತೆಯ ಎಲ್ಲ ವಲಯಗಳಲ್ಲಿ ಸರ್ಕಾರ ಅವ್ಯವಸ್ಥೆ ಮಾಡಿದೆ. ನಿರುದ್ಯೋಗ ಹಾಗೂ ಬೆಲೆ ಏರಿಕೆಯಂತಹ ವಿಷಯಗಳ ನಿರ್ವಹಣೆಯಲ್ಲಿ ಸರ್ಕಾರ ಅಸಮರ್ಥವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಅದಾನಿ ಹಗರಣ, ಜಾತಿ ಗಣತಿ ಹಾಗೂ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಆರ್ಥಿಕ ಬಿಕ್ಕಟ್ಟುಗಳಂತಹ ವಿಷಯಗಳಿಂದ (4ನೇ ಪುಟಕ್ಕೆ)

ಪ್ರಥಮ ವರ್ಷದ ಪುಣ್ಯಸ್ಮರಣೆ




ಲಿಂ. ಶ್ರೀ ಸಾಸನೂರು ಎಂ.ಚಂದ್ರಶೇಖರಪ್ಪ
ಮಾಲೀಕರು,
ಸಾಸನೂರು ಪ್ರಾವಿಜನ್ ಸ್ಟೋರ್ಸ್,
ಹೊಂಡದ ಸರ್ಕಲ್

ನೀವು ನಮ್ಮನಗಲಿ ಇಂದಿಗೆ ಒಂದು ವರ್ಷವಾಯಿತು. ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಸದಾ ನಲಿದಾಡುತ್ತದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತಾ ಅನುದಿನವು ನಿಮ್ಮನ್ನು ಸ್ಮರಿಸುವವರು.

ಧರ್ಮಪತ್ನಿ: ಶ್ರೀಮತಿ ಪುಷ್ಪ ಚಂದ್ರಶೇಖರಪ್ಪ,
ಪುತ್ರ: ಶ್ರೀ ಭರತ್.ಸಿ., ಸೊಸೆ: ಶ್ರೀಮತಿ ಸಹನ ಭರತ್
ಪುತ್ರಿ: ಶ್ರೀಮತಿ ವಿದ್ಯಾ.ಸಿ, ಅಳಿಯ: ಶ್ರೀ ಜೆ.ಕೆ. ಪ್ರವೀಣ್ ಕುಮಾರ್
ಮೊಮ್ಮಕ್ಕಳಾದ: ದೈವಿಕ್ ಜೆ.ಪಿ., ಲಿಹಾಸ್ವಿ ಜೆ.ಪಿ.
ಮನೋಜ್ಞಾ.ಬಿ ಸಾಸನೂರು, ನಿರ್ಣಯ ಆದರ್ಶ ಸಾಸನೂರು ಹಾಗೂ ಬಂಧು ಮಿತ್ರರು.

ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ 26.09.2023ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ನಗರದ ಬಾಡ ಕ್ರಾಸ್ ಹತ್ತಿರವಿರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಬಿ.ದುರ್ಗದ ಹರಿಯಪ್ಪರ ಹೆಚ್.ಕೆ. ಲಿಂಗರಾಜು ನಿಧನ



ಹೊಳಲ್ಕೆರೆ ತಾಲ್ಲೂಕು ಬಿ.ದುರ್ಗದ ಗ್ರಾಮದ ವಾಸಿ,
ಶ್ರೀ ಹೆಚ್. ಕೆ. ಲಿಂಗರಾಜು ಅವರು
ದಿನಾಂಕ 24-09-2023ರ ಭಾನುವಾರ ರಾತ್ರಿ 7 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು.
ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ದಿ|| ಲಿಂಗರಾಜು ಅವರ ಪಾರ್ಥಿವ ಶರೀರವನ್ನು ದಾವಣಗೆರೆ ಸಿಟಿ ತರಳಬಾಳು ಬಡಾವಣೆಯಲ್ಲಿರುವ 17ನೇ ಕ್ರಾಸ್, ಲಕ್ಷ್ಮಿವೆಂಕಟೇಶ್ವರ ಗ್ರಾನೈಟ್ಸ್ ಹಿಂಭಾಗದಲ್ಲಿರುವ (# 2002/16/19) ಮೃತರ ನಿವಾಸದಲ್ಲಿ ದಿನಾಂಕ 26-09-2023ರ ಮಂಗಳವಾರ ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಅಂತಿಮ ದರ್ಶನಕ್ಕಾಗಿ ಇರಿಸಲಾಗುವುದು.

ನಂತರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಹೊಳಲ್ಕೆರೆ ತಾಲ್ಲೂಕು ಬಿ.ದುರ್ಗ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಧರ್ಮಪತ್ನಿ, ಪುತ್ರ, ಪುತ್ರಿ ಹಾಗೂ ಹರಿಯಪ್ಪರ ವಂಶಸ್ಥರು
ಮೊ. : 94484 58412, 98454 93681, 96633 66710

ಶಾಮನೂರು ಪೂಜಾರ್ ಕರಿಬಸಪ್ಪ ಶ್ರೀಮತಿ ಸುಮಿತ್ರ ಕರಿಬಸಪ್ಪ ನಿಧನ



ದಾವಣಗೆರೆ ಸಿಟಿ ಶಾಮನೂರು 5ನೇ ಕ್ರಾಸ್ ವಾಸಿ
ಶಾಮನೂರು ಪೂಜಾರ್ ಕರಿಬಸಪ್ಪ (52)
ಮತ್ತು
ಶ್ರೀಮತಿ ಸುಮಿತ್ರ ಕರಿಬಸಪ್ಪ (48)
ಇವರು ದಿನಾಂಕ 24.09.2023ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25.09.2023ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ, ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ,
ಅಮರಾವತಿ ವಂಶಸ್ಥರು, ಪೂಜಾರ್ ವಂಶಸ್ಥರು, ಶಾಮನೂರು. ಮೊ : 80953 64113, 76766 15313.

# ಶಿವ ವಿವಿಧೋದ್ದೇಶ ಸಹಕಾರ ಸಂಘಕ್ಕೆ 43.70 ಲಕ್ಷ ರೂ. ಲಾಭ

ಮಲೇಬೆನ್ನೂರು, ಸೆ.24- ಇಲ್ಲಿನ ಶಿವ ವಿವಿಧೋದ್ದೇಶ ಸಹಕಾರ ಸಂಘವು 2023ರ ಮಾರ್ಚ್ ಅಂತ್ಯಕ್ಕೆ 43,70,343 ರೂ. ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಲು ಹರ್ಷಿಸುತ್ತೇವೆ ಎಂದು ಸಂಘದ ಅಧ್ಯಕ್ಷ ಡಾ.ಬಿ.ಚಂದ್ರಶೇಖರ್ ಹೇಳಿದರು.

ಅವರು, ಶುಕ್ರವಾರ ಪಟ್ಟಣದ ನಿಟ್ಟೂರು ರಸ್ತೆಯಲ್ಲಿರುವ ವೀರಶೈವ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಶಿವ ವಿವಿಧೋದ್ದೇಶ ಸಹಕಾರ ಸಂಘದ 2022-23ನೇ ಸಾಲಿನ ಸರ್ವ ಸದಸ್ಯರ 17 ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

3387 ಸದಸ್ಯರನ್ನು ಹೊಂದಿರುವ ಸಂಘವು 8,78,03,466 ರೂ. ಸಾಲ ಸೌಲಭ್ಯ ಕಲಿಸಿದ್ದು, 8,52,88,566 ರೂ. ಠೇವಣಿಗಳನ್ನು ಹೊಂದಿದೆ. ಠೇವಣಿದಾರರ ಹಿತದೃಷ್ಟಿಯಿಂದ ವಿವಿಧ ಬ್ಯಾಂಕ್‌ಗಳಲ್ಲಿ 2,55,43,689 ರೂ. ಠೇವಣಿ ವಿನಿಯೋಗ ಮಾಡಿದ್ದೇವೆ.

ಸಾರ್ವಜನಿಕರ ಅನುಕೂಲಕ್ಕಾಗಿ ಇ-ಸ್ಟ್ಯಾಂಪಿಂಗ್ ಕೇಂದ್ರವನ್ನು ನಡೆಸುತ್ತಿದ್ದು, ಸಂಘವು ಕುಂಬಳೂರು - ನಿಟ್ಟೂರು ನಡುವೆ 2 ಎಕರೆ ಜಮೀನು ಹೊಂದಿದೆ. ಈ ವರ್ಷ ಹೊಳೆಸಿರಿಗೆರೆಯಲ್ಲಿ ಶಾಖೆಗೆ ಸ್ವಂತ ಕಟ್ಟಡ ಕಟ್ಟುವ ಉದ್ದೇಶದಿಂದ 15,58,500 ರೂ.ಗಳಿಗೆ 492.48 ಚದರ ಮೀಟರ್ ನಿವೇಶನವನ್ನು ಖರೀದಿಸಿದ್ದೇವೆ.

ಸದಸ್ಯರು ಈ ವರ್ಷದ ಲಾಭಾಂಶ ಬಿಟ್ಟುಕೊಟ್ಟರೆ ಕಟ್ಟಡ ಕಾಮಗಾರಿ ಪ್ರಾರಂಭಿಸುತ್ತೇವೆ ಎಂದು ಡಾ. ಬಿ.ಚಂದ್ರಶೇಖರ್ ಅವರು ಕೇಳಿದಾಗ ಸದಸ್ಯರು ಚಪ್ಪಾಳೆ ತಟ್ಟುವ ಮೂಲಕ ಸಮ್ಮತಿ ಸೂಚಿಸಿದರು.



ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್ ಸಂತಸ

ಹಿರಿಯ ನಿರ್ದೇಶಕ ಬಣಕಾರ ವಿರೂಪಾಕ್ಷಪ್ಪ ಮಾತನಾಡಿ, ಸದಸ್ಯರ ಹಾಗೂ ಸಮಾಜದವರ ಸಹಕಾರದಿಂದ ನಮ್ಮ ಸಂಘವು ಅಲ್ಪ ಅವಧಿಯಲೇ ಸಾಕಷ್ಟು ಪ್ರಗತಿ ಸಾಧಿಸಿದೆ ಎಂದರು.

ಸನ್ಮಾನಿತರಾದ ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಸಾಲ ಪಡೆದವರು ಸಕಾಲಕ್ಕೆ ಮರುಪಾವತಿ ಮಾಡದರೆ ಮಾತ್ರ ಸಂಘ-ಸಂಸ್ಥೆಗಳು ಉಳಿಯುತ್ತವೆ. ಆಡಳಿತ ಮಂಡಳಿಯವರು ಕೂಡಾ ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಿದಾಗ ಸಹಕಾರ ಸಂಘಗಳು ಬೆಳೆಯಲು ಸಾಧ್ಯ ಎಂದರು.

ಇನ್ನೋರ್ವ ಸನ್ಮಾನಿತರಾದ ಹೊನ್ನಾಳಿ ಶಾಸಕ ಡಿ.ಜಿ.ಶಾಂತನಗೌಡ ಮಾತನಾಡಿ, ಶಿವ ವಿವಿಧೋದ್ದೇಶ ಸಹಕಾರ ಸಂಘವು ಎಲ್ಲರ ನೆಚ್ಚಿನ ಸಂಘವಾಗಿ ಬೆಳೆಯಲಿ ಎಂದು ಶುಭ ಹಾರೈಸಿದರು.

ನಿಟ್ಟೂರಿನ ಎನ್.ಜಿ.ಶಿವಾಜಿ ಪಾಟೀಲ್, ಕುಂಬಳೂರಿನ ಕೆ.ತೀರ್ಥಪ್ಪ, ನಿಟ್ಟೂರಿನ ಧನಂಜಯ, ಕೊಮಾರನಹಳ್ಳಿಯ ಡಿ.ಸಾಗರ್ ಮಾತನಾಡಿದರು.

ಸಂಘದ ನಿರ್ದೇಶಕ ಹಾಗೂ ವಕೀಲರಾದ ಹೆಚ್.ಬಿ.ಶಿವಕುಮಾರ್ ಅವರು ಸ್ವಾಗತಿಸಿ, 2022-23ನೇ ಸಾಲಿನ ವಾರ್ಷಿಕ ವರದಿಯನ್ನು ಓದಿದರು.

ಸಂಘದ ಕಾರ್ಯದರ್ಶಿ ಜಿ.ಎಂ. ನಳಿನಾ ಸಭೆಯ ವಿಷಯ ಸೂಚಿ ಓದಿದರೆ, ಎಫ್‌ಡಿಎ ಹೆಚ್.ಹನುಮಂತಪ್ಪ ಹಿಂದಿನ ವಾರ್ಷಿಕ ಸಭೆಯ ನಡಾವಳಿಗಳನ್ನು ತಿಳಿಸಿದರು. ಸಂಘದ ಉಪಾಧ್ಯಕ್ಷ ಜಿ. ಆಂಜನೇಯ ವಾರ್ಷಿಕ ವರದಿ - ಓದಿದರು. ಸಿರಿಗೆರೆ ಶಾಖೆಯ ಎಂ.ಎಸ್.ಅಕ್ಷರ ಲೆಕ್ಕ ಪರಿಶೋಧನಾ ವರದಿಯನ್ನು ಮತ್ತು ಕೇಂದ್ರ ಕಚೇರಿಯ ಕೆ.ಶಂಭುಲಿಂಗ ಅವರು, ಹೆಚ್ಚುವರಿ ಖರ್ಚುಗಳನ್ನು ತಿಳಿಸಿ ಒಪ್ಪಿಗೆ ಪಡೆದರು.

ಸಿರಿಗೆರೆ ಶಾಖೆಯ ಬಿ.ಹೆಚ್.ವಿಜಯ್ ಅಂದಾಜು ಆಯ-ವ್ಯಯ ಪತ್ರಿಕೆಗೆ ಮತ್ತು ಸಂಘದ ನಿರ್ದೇಶಕ ಕೆ.ಎಸ್.ರಂಗನಾಥ್ ಅವರು, ನಿವ್ವಳ ಲಾಭ ವಿಭಾಗಣೆಗೆ ಸಭೆಯ ಮಂಜೂರಾತಿ ಪಡೆದರು.

ಸಂಘದ ನಿರ್ದೇಶಕ ಬೆಳ್ಳೂಡಿ ರವಿಶಂಕರ್ ಅವರು, ಲೆಕ್ಕ ಪರಿಶೋಧಕರ ನೇಮಕ ಹಾಗೂ ಅವರ ಸಂಭಾವನೆಯನ್ನು ಸಭೆಯ ಗಮನಕ್ಕೆ ತಂದರು. ಕೇಂದ್ರ ಕಚೇರಿಯ ಕೆ.ಜಿ.ಅಕ್ಷತ ಅವರು, ಅನುಪಾಲನಾ ವರದಿಗೆ ಸಭೆಯ ಅನುಮೋದನೆ ಪಡೆದುಕೊಂಡರು.

ಅತೀ ಹೆಚ್ಚು ಪಿಗ್ಮಿ ಸಂಗ್ರಹ ಮಾಡಿದ ಬೆಳ್ಳೂಡಿ ಎನ್.ಎಸ್.ವಿಜಯಕುಮಾರ್, ಹೊಳೆಸಿರಿಗೆರೆಯ ಕೆ.ರಾಜಶೇಖರ್ ಮತ್ತು ಅತಿ ಕಡಿಮೆ ಸುಸ್ತಿ ಸಾಲಗಾರರನ್ನು ಹೊಂದಿರುವ ಮಲೇಬೆನ್ನೂರಿನ ಸಿರಿಗೆರೆ ನಾಗರಾಜ್ ಮತ್ತು ಉಕ್ಕಡಗಾತ್ರಿಯ ಕೆ.ಚಂದ್ರಶೇಖರ್ ಅವರನ್ನು ಸನ್ಮಾನಿಸಿ, ಪ್ರೋತ್ಸಾಯಿಸಲಾಯಿತು.

ಮುಖಂಡರಾದ ಕೆ.ಜಿ.ವೀರನಗೌಡ್ರು, ಜಿ.ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಯಕ್ಕನಹಳ್ಳಿ ಬಸವರಾಜಪ್ಪ, ಹಳೇಮನೆ ಶಂಭುಲಿಂಗಪ್ಪ, ಮುದೇಗೌಡ್ರ ತಿಪ್ಪೇಶ್, ಓ.ಜಿ.ಕುಮಾರ್, ಪ್ರಭುಸ್ವಾಮಿ, ಹನಗವಾಡಿ ರೇವಣಸಿದ್ದಪ್ಪ, ಹಲ್ಮನಿ ನಿಂಗಪ್ಪ, ಯರೇಚಿಕ್ಕನಹಳ್ಳಿ ರಂಗನಾಥ್, ಓ.ಜಿ.ರುದ್ರಗೌಡ, ಸಿರಿಗೆರೆ ಸಿದ್ದಪ್ಪ, ತಳಸದ ಬಸವರಾಜ್, ಕೊಕ್ಕನೂರು ಸೋಮಶೇಖರ್, ಬೆಳ್ಳೂಡಿ ಸಿದ್ದವೀರಪ್ಪ, ದಿಬ್ಬಹಳ್ಳಿ ಓಂಕಾರಪ್ಪ, ಎಸ್‌ಟಿಡಿ ವಿಯಕುಮಾರ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಸಂಘದ ನಿರ್ದೇಶಕರಾದ ಶ್ರೀಮತಿ ಸರೋಜಮ್ಮ ಬಿ.ಭರಮಗೌಡ್ರು, ಶ್ರೀಮತಿ ನಾಗರತ್ನ ಬಿ.ಜಿ.ಧನುಂಜಯ, ಹೆಚ್. ಷಣ್ಮುಖಪ್ಪ, ಎ.ದೇವೇಂದ್ರಪ್ಪ, ಸಿರಿಗೆರೆ ಸಿದ್ದೇಶ್ ವೇದಿಕೆಯಲ್ಲಿದ್ದರು.

ಸಂಘದ ನಿರ್ದೇಶಕ ಹಾಗೂ ಪತ್ರಕರ್ತ ಜಿಗಳಿ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರೆ, ಸಂಘದ ವಿಷಯ ಆಹ್ವಾನಿತರಾದ ಸಿರಿಗೆರೆಯ ಬಿ.ಶೇಖರಪ್ಪ ವಂದಿಸಿದರು.

## ಇಂದಿನ ದಾವಣಗೆರೆ ಬಂದ್‌ಗೆ ಜಿಲ್ಲಾ ಕಸಾಪ ನೈತಿಕ ಬೆಂಬಲ




ಸರ್ಕಾರ ಮತ್ತು ಅಧಿಕಾರಿಗಳ ಗಮನ ಸೆಳೆಯುವುದಕ್ಕಾಗಿ ನಾಲೆಯಲ್ಲಿ ಸತತವಾಗಿ ನೀರು ಹರಿಸಬೇಕೆಂಬ ಒತ್ತಾಸೆಯಿಂದ ಭಾರತೀಯ ರೈತ ಒಕ್ಕೂಟ ಇಂದು ದಾವಣಗೆರೆ ಬಂದ್‌ಗೆ ಕರೆ ನೀಡಿದೆ. ಅನ್ನದಾತನ ಹಿತ ಕಾಯಲು ಕನ್ನಡ ಸಾಹಿತ್ಯ ಪರಿಷತ್ತು ಸದಾ ಬದ್ಧವಾಗಿದೆ. ಈ ಬಂದ್ ಅನ್ನು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಎಲ್ಲಾ ಕನ್ನಡದ ಮನಸ್ಸುಗಳು ನೈತಿಕವಾಗಿ ಬೆಂಬಲಿಸುವುದೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ತಿಳಿಸಿದ್ದಾರೆ.

## ಬಂದ್‌ಗೆ ಜಿಲ್ಲಾ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಸಂಘ ಬೆಂಬಲ

ಭದ್ರಾ ನಾಲೆಗಳಿಗೆ ನಿರಂತರ 100 ದಿನ ನೀರು ಹರಿಸುವುದಾಗಿ ಆದೇಶ ಹೊರಡಿಸಿದ್ದ ಸರ್ಕಾರ ಈಗ ಇದ್ದಕ್ಕಿದ್ದಂತೆ ಏಕಾಏಕಿ ನೀರು ಹರಿಸುವುದನ್ನು ನಿಲುಗಡೆ ಮಾಡಿರುವುದನ್ನು ಖಂಡಿಸಿ ಭಾರತೀಯ ರೈತ ಒಕ್ಕೂಟ ಇಂದು ಕರೆ ನೀಡಿರುವ ದಾವಣಗೆರೆ ಬಂದ್‌ಗೆ ಜಿಲ್ಲಾ ಶಾಶ್ವತ ಅನುದಾನರಹಿತ ಶಾಲಾ ಆಡಳಿತ ಮಂಡಳಿಗಳ ಸಂಘ ಬೆಂಬಲ ವ್ಯಕ್ತಪಡಿಸಿದೆ ಎಂದು ಸಂಘದ ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ, ಪ್ರಕಾಶ್ ಹೆಚ್.ಜಿ., ವೀರೇಶ್ ಬಿರಾದಾರ್, ಎಸ್.ಎಂ.ಮಂಜುನಾಥ ಸ್ವಾಮಿ ಪ್ರಕಾಶಣ್ಣ, ದಿನೇಶ್, ಶ್ಯಾಗಲೆ ಮಲ್ಲೇಶ್ವರಪ್ಪ, ಬಸವರಾಜಪ್ಪ, ಮಧುಕೇಶ್, ನಾಗರಾಜಯ್ಯ, ಅಬ್ದುಲ್, ಗಣೇಶ್, ಪಂಚಾಕ್ಷರಯ್ಯ, ಮಲ್ಲಮ್ಮ ಮುಂತಾದವರು ತಿಳಿಸಿದ್ದಾರೆ.

## ಎಲೆಬೇತೂರಿನಲ್ಲಿಂದು ಅನ್ನಸಂತರ್ಪಣೆ



ದಾವಣಗೆರೆ ತಾಲ್ಲೂಕು ಎಲೆ ಬೇತೂರು ಗ್ರಾಮದ ಪುಟಗನಾಳು ರಸ್ತೆಯಲ್ಲಿ ನಿರ್ಮಿಸಿರುವ ಶ್ರೀ ಗಜಕರ್ಣ ಫ್ರೆಂಡ್ಸ್ ಗ್ರೂಪ್ ವತಿಯಿಂದ ಪ್ರತಿಷ್ಠಾಪಿಸಿರುವ ಶ್ರೀ ಗಣಪತಿಗೆ ಇಂದು ವಿಶೇಷ ಪೂಜೆ ಸಲ್ಲಿಸಿ ಮಹಾಮಂಗಳಾರತಿ ನಡೆಯುತ್ತದೆ. ನಂತರ ಮಧ್ಯಾಹ್ನ 12 ಕ್ಕೆ ಪ್ರಸಾದ ವಿನಿಯೋಗ ನಡೆಯಲಿದೆ.

# ವಂದೇ ಭಾರತ್ ದೇಶದ ಮೂಲೆಗಳಿಗೆ ತಲುಪಲಿದೆ

ನವದೆಹಲಿ, ಸೆ. 24 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾನುವಾರ ಒಂಭತ್ತು ವಂದೇ ಭಾರತ್ ರೈಲುಗಳಿಗೆ ಚಾಲನೆ ನೀಡಿದ್ದಾರೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಧಾನಿ ಮೋದಿ, 140 ಕೋಟಿ ಭಾರತೀಯರ ಆಶಯಗಳಿಗೆ ಅನುಗುಣವಾಗಿ ರೈಲ್ವೆಯ ವೇಗ ಹಾಗೂ ಮೂಲಭೂತ ಸೌಲಭ್ಯದ ಪ್ರಮಾಣಕ್ಕೆ ಆದ್ಯತೆ ನೀಡಲಾಗಿದೆ ಎಂದರು.

ವಂದೇ ಭಾರತ್ ರೈಲಿನ ಜನ ಪ್ರಿಯತೆ ನಿರಂತರವಾಗಿ ಹೆಚ್ಚಾಗುತ್ತಿದೆ. ಈಗಾಗಲೇ ಈ ರೈಲುಗಳಲ್ಲಿ 1,11,00,000 ಜನರು ಪ್ರಯಾಣಿಸಿ ದ್ದಾರೆ ಎಂದವರು ತಿಳಿಸಿದರು.





ಇದುವರೆಗೂ 25 ವಂದೇ ಭಾರತ್ ರೈಲುಗಳು ಸಂಚರಿಸುತ್ತಿದ್ದವು. ಈಗ ಇನ್ನೂ ಒಂಭತ್ತು ರೈಲುಗಳನ್ನು ಸೇರ್ಪಡೆ ಮಾಡಲಾಗಿದೆ ಎಂದರು.

ವಂದೇ ಭಾರತ್ ರೈಲುಗಳು ದೇಶದ ಎಲ್ಲ ಭಾಗಗಳನ್ನು ಸಂಪರ್ಕಿಸುವ ದಿನಗಳು ದೂರವಿಲ್ಲ. ರೈಲ್ವೆ ಈಗ ಬಡ ಹಾಗೂ ಮಧ್ಯಮ ವರ್ಗದ ಪ್ರಯಾಣಿಕರ ನಂಬಿಕಾರ್ಹ ಪ್ರಯಾಣ ಮಾಧ್ಯಮವಾಗಿದೆ ಎಂದು ಪ್ರಧಾನಿ ತಿಳಿಸಿದರು. ದೇಶದಲ್ಲಿ ಒಂದು ದಿನ ರೈಲುಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಕೆಲ ದೇಶಗಳ ಜನಸಂಖ್ಯೆಗಿಂತ ಹೆಚ್ಚಾಗಿದೆ. ಆದರೂ ರೈಲ್ವೆ ಆಧುನೀಕರಣಕ್ಕೆ ಹೆಚ್ಚು ಗಮನ ಹರಿಸಿರಲಿಲ್ಲ. ಆದರೆ, ತಮ್ಮ ಸರ್ಕಾರ ರೈಲ್ವೆ ಬದಲಾವಣೆಯತ್ತ ಕೆಲಸ ಮಾಡುತ್ತಿದೆ ಎಂದರು.

## ನಗರದಲ್ಲಿ ಇಂದು ಸರಳ ಮನೆಮದ್ದು ಕಾರ್ಯಕ್ರಮ

ಸೇವಾ ಭಾರತಿ ಟ್ರಸ್ಟ್ ವತಿಯಿಂದ ಸರಳ ಮನೆಮದ್ದು ಕಾರ್ಯಕ್ರಮವು ಇಂದು ಮಧ್ಯಾಹ್ನ 1:15 ಕ್ಕೆ ಕೆ.ಬಿ.ಬಡಾ ವಣೆಯ ಜಯನಿವಾಸದಲ್ಲಿ ನಡೆಯಲಿದೆ. ಎಲ್ಲಾ ತರಹದ ಖಾಯಿಲೆಗಳಿಗೆ ಮನೆಯಲ್ಲಿಯೇ ದೊರೆಯುವಂತಹ ವಸ್ತುಗಳಿಂದ ಔಷಧಿಗಳನ್ನು ಮಾಡಿಕೊಂಡು ಗುಣಮುಖ ಮಾಡಿಕೊಳ್ಳವುದು ಹೇಗೆ ಎಂಬುದನ್ನು ಪಾರಂಪರಿಕ ವೈದ್ಯ ಡಾ|| ಹನುಮಂತ ಮಳಲಿ ತಿಳಿಸಿಕೊಡಲಿದ್ದು, ನಗರ ಸಂಘ ಚಾಲಕರಾದ ಜಯರುದ್ರೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ವಿವರಗಳಿಗೆ ಸಂಪರ್ಕಿಸಿ : 9964328197, 9113041950.

# ಬ್ಯಾಂಕುಗಳು ಸಾಲ ವಸೂಲಿಯತ್ತ ಗಮನ ಹರಿಸಿದರೆ ಪ್ರಗತಿ ಸಾಧ್ಯ



ಹರಿಹರದ ಹರ ವಿವಿಧೋದ್ದೇಶ ಸಹಕಾರ ಸಂಘದ ಸಾಮಾನ್ಯ ಸಭೆಯಲ್ಲಿ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್

ಹರಿಹರ, ಸೆ. 24 - ಸಹಕಾರಿ ಸಂಘಗಳು ಮತ್ತು ಬ್ಯಾಂಕುಗಳು ಸಾಲ ವಸೂಲಿಯತ್ತ ಹೆಚ್ಚು ಗಮನ ಹರಿಸಿದರೆ ಪ್ರಗತಿ ಸಾಧಿಸುತ್ತವೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅಭಿಪ್ರಾಯಪಟ್ಟರು.

ನಗರದ ಐರಣಿ ಹೊಳೆಮಠದ ಸಭಾಂಗಣದಲ್ಲಿ ಶ್ರೀ ಹರ ವಿವಿಧೋದ್ದೇಶ ಸಹಕಾರ ಸಂಘದ 13 ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಲ ನೀಡುವಾಗ ಜವಾಬ್ದಾರಿಯುತ ವ್ಯಕ್ತಿಗಳಿಂದ ಜಾಮೀನು ಪಡೆಯಬೇಕು. ಎಲ್ಲಾ ಸದಸ್ಯರಿಗೆ ಗುಂಪು ವಿಮೆ ಮಾಡಿಸಿದರೆ, ವ್ಯಕ್ತಿ ಮರಣ ಹೊಂದಿದಾಗ ವಿಮೆ ರೂಪದಲ್ಲಿ ಹಣ ಸಿಗುತ್ತದೆ ಎಂದರು. ಆಡಳಿತ ಮಂಡಳಿಯವರು ಒಗ್ಗಟ್ಟು ಪ್ರದರ್ಶಿಸಿದಾಗ ಮಾತ್ರ ಸಹಕಾರ ಸಂಘಕ್ಕೆ ಸ್ವಂತ ಕಟ್ಟಡ ತ್ವರಿತವಾಗಿ ಹೊಂದಬಹುದು. ಈ ಬಗ್ಗೆ ನಾನೂ ಸಹಕಾರ ನೀಡುತ್ತೇನೆ ಎಂದರು.

ಶ್ರೀ ಹರ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಅಂಗಡಿ ಬಸಟ್ಟೆಪ್ಪ ಮಾತನಾಡಿ, ಸಂಘವು 2022-23 ನೇ ಸಾಲಿನಲ್ಲಿ 20 ಲಕ್ಷದ 87 ಸಾವಿರ ರೂ. ಲಾಭವನ್ನು ಗಳಿಸಿದೆ ಎಂದರು.

ಸಂಘವು 88,02,240 ರೂಪಾಯಿ ಷೇರು ಬಂಡವಾಳದೊಂದಿಗೆ 3,82,61,672 ರೂ. ಠೇವಣಿಗಳನ್ನು ಹೊಂದಿದೆ. ಕಳೆದ ವರ್ಷದ ಕೊನೆಯಲ್ಲಿ 5,00,14,207 ರೂ. ಬರಬೇಕಾದ ಸಾಲಗಳಿದ್ದು, ಈ ಸಾಲಿಗೆ 4,81,00, 550 ರೂ. ಆಗಿರುತ್ತದೆ ಎಂದರು.

ಸಂಘದ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಜಿ.ವಿ. ಲೋಕೇಶ್ ಓದಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಬಸವರಾಜ್ ಓಂಕಾರಿ, ನಿರ್ದೇಶಕರಾದ ಡಿ.ಜಿ. ಶಿವಾನಂದಪ್ಪ, ಎಂ. ಗುರುನಾಥ್, ಟಿ.ಎನ್. ನಾಗರಾಜಪ್ಪ, ಬಿ. ಬಸವಲಿಂಗಪ್ಪಗೌಡ್ರು, ಎಸ್.ಎಂ. ರವಿ, ಲತಾ ಕೊಟ್ರೇಶ್, ರೂಪಾ ನಾಗರಾಜ್, ಪಿ.ಎನ್. ಗೋಪಿ, ಎನ್. ಆರ್ ಶಂಕ್ರಪ್ಪ, ಎಂ. ನಾಗರಾಜ್, ಸಿಬ್ಬಂದಿಗಳಾದ ಕಾರ್ಯದರ್ಶಿ ಜಿ.ವಿ. ಲೋಕೇಶ್, ಕ್ಯಾಷಿಯರ್ ಜಿ.ಹೆಚ್. ಹರೀಶ್, ಬಿ.ಓ. ಗೋವಿಂದರಾಜ್, ಷಣ್ಮುಖಪ್ಪ, ಪಿಗ್ಮಿ ಸಂಗ್ರಾಹಕರಾದ ಕೆ. ಆರ್. ಶಾಂತಪ್ಪ, ಪ್ರದೀಪ್ ಕುಮಾರ್, ಶಿವಶಂಕರ್ ಎರಸೀಮಿ,ಎಸ್.ಹೆಚ್. ಬಸವಕುಮಾರ್, ಜಿ.ಎನ್. ಉಮೇಶ್, ಐ.ಎಸ್. ಮಹೇಶ್ವರಪ್ಪ, ಜಿ. ಸಿದ್ದೇಶ್ವರ, ಪಿ.ಹೆಚ್. ವಾಮದೇವ, ಎಂ. ಅರುಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಹರಪನಹಳ್ಳಿ : ಇತಿಹಾಸದ ಮೆರಗನ್ನು ಪುಸ್ತಕಗಳಿಂದಲೇ ಓದಿ ತಿಳಿದರೆ ಹೆಚ್ಚು ಸುಖ, ನೆಮ್ಮದಿ ; ಎಂ.ಪಿ.ಲತಾ ಮಲ್ಲಿಕಾರ್ಜುನ



ಹರಪನಹಳ್ಳಿ, ಸೆ.24- ಇತಿಹಾಸದ ಮೆರಗನ್ನು ಪುಸ್ತಕಗಳಿಂದಲೇ ಓದಿ ತಿಳಿದರೆ ಹೆಚ್ಚು ಸುಖ - ನೆಮ್ಮದಿ ನೀಡುತ್ತದೆ. ಓದುವ ಅಭಿರುಚಿ ಬೆಳೆಸಲು ಇಂದಿನ ಬರಹಗಾರರು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದು ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ರೇಣುಕಾಚಾರ್ಯ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಬರಹಗಾರರ ಸಂಘ ಹೂವಿನ ಹಡಗಲಿ, ಕನ್ನಡ ಸಾಹಿತ್ಯ ಪರಿಷತ್ ಹರಪನಹಳ್ಳಿ, ಕರ್ನಾಟಕ ರಾಜ್ಯ ಬರಹಗಾರರ ಸಂಘ ಹರಪನಹಳ್ಳಿ, ಇವರ ಸಹಯೋಗದಲ್ಲಿ ನೂರು ಕೃತಿಗಳ ಲೋಕಾರ್ಪಣೆ ಹಾಗೂ ರಾಜ್ಯ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು

ಇಂದಿನ ದಿನಗಳಲ್ಲಿ ಓದುವ ಹವ್ಯಾಸ ದೂರವಾಗುತ್ತಿದ್ದರೂ ಕೃತಿಗಳನ್ನು ರಚಿಸುತ್ತಿರುವ ಲೇಖಕರ ಸಂಖ್ಯೆ ಬೆಳೆಯುತ್ತಿರುವುದು ಸಾಹಿತ್ಯ ಕ್ಷೇತ್ರ ಇನ್ನೂ ವಿರಾಜಿಸುತ್ತಿದೆ. ರಾಜ್ಯ ಬರಹಗಾರರು ರಚಿಸಿರುವ 118 ಕೃತಿಗಳನ್ನು ಒಂದೇ ವೇದಿಕೆಯಲ್ಲಿ ಬಿಡುಗಡೆ ಮಾಡುತ್ತಿರುವುದು ಹೆಮ್ಮೆಯಾಗಿದೆ. ಇಂದಿನ ಪೀಳಿಗೆ ಗುಬ್ಬಚ್ಚಿ ಗೂಡೇ ನೋಡಿಲ್ಲ ಅದನ್ನು ಪುಸಕ್ತದಲ್ಲಿ 'ಗುಬ್ಬಚ್ಚಿ ಗೂಡಿನ ಬೆರಗು' ಎಂದು ರಸವತ್ತಾಗಿ ರಚಿಸಿ, ಓದುಗರಿಗೆ ನೀಡಿರುವ ಬರಹಗಾರರ ಬಗ್ಗೆ ಹೆಮ್ಮೆಯಾಗಿದೆ. ಇದೇ ರೀತಿ ಪ್ರಸ್ತುತ ಘಟನೆಗಳ ಕುರಿತು ಬರೆದು ಓದುಗರನ್ನು ಸೆಳೆಯುತ್ತಿರುವ ಪ್ರಯತ್ನ ಸಫಲವಾಗಲಿ ಎಂದರು.

ಕರ್ನಾಟಕ ರಾಜ್ಯ ಬರಹಗಾರರ ಸಂಘದ ಅಧ್ಯಕ್ಷ ಮಧುನಾಯ್ಕ್ ಮಾತನಾಡಿ, ರಾಜ್ಯದ ವಿವಿದ ಜಿಲ್ಲೆಗಳಿಂದ ಬಂದ 118 ಕೃತಿಗಳನ್ನು ರಚಿಸಿರುವ ಪುಸ್ತಕಗಳನ್ನು ಒಂದೇ ವೇದಿಕೆಯಲ್ಲಿ ಕೃತಿಗಳ ಲೋಕಾರ್ಪಣೆ ಮಾಡುತ್ತಿರುವುದು ಉತ್ತಮ ಕಾರ್ಯವಾಗಿದ್ದು, ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ರಾಜ್ಯದ ಎಲ್ಲ ಬರಹಗಾರರ ಕೆಲಸ ಶ್ಲಾಘನೀಯವಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ. ಉಚ್ಚಂಗೆಪ್ಪ ಮಾತನಾಡಿ, ಸರ್ಕಾರಿ ನೌಕರರು ಹಾಗೂ ವಿವಿಧ ವೃತ್ತಿಗಳಲ್ಲಿ ಒತ್ತಡದ ಬದುಕಿನಲ್ಲಿ ಕೆಲಸ ಮಾಡುತ್ತಿರುವ ಬರಹಗಾರರು ಅನೇಕ ಉತ್ತಮ ಕಥೆಗಳನ್ನು ಕವಿತೆಗಳನ್ನು ರಚಿಸಿ, ಲೋಕರ್ಪಣೆ ಮಾಡುತ್ತಿರವುದು ಹೆಮ್ಮೆಯ ವಿಷಯವಾಗಿದೆ. ಎಲೆಮರೆಯ ಕಾಯಿಯಂತೆ ಇರುವ ನೂರಾರು ಕವಿಗಳು ಸಾಹಿತಿಗಳನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ಬರಹಗಾರರ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿದೆ ಎಂದರು.

ಹಿರಿಯ ಸಾಹಿತಿ ರಾಮನಮಲಿ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಕಾರ್ಯಕ್ರಮ ಜರುಗಿತು. ಆಶಯ ನುಡಿಗಳನ್ನು ಹಿರಿಯ ಸಾಹಿತಿ ಸುಭದ್ರಮ್ಮ ಮಾಡ್ಲಿಗೇರಿ ನಡೆಸಿಕೊಟ್ಟರು. ಕವಿ ಋಷಿ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಮೈಲಾರಲಿಂಗನ ವಚನಕಾರ ಹಾಗೂ ರಾಜ್ಯಪ್ರಶಸ್ತಿ ಪುರಸ್ಕೃತ ಶಿಕ್ಷಕ ಹೆಚ್.ಡಿ.ಜಗ್ಗಿನ್, ಗೊರೂರು ಅನಂತರಾಜ, ಲಕ್ಷ್ಮಿ ಮಾನಸ ಹಾಗೂ ಯಾಕೂಬ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಖ್ಯಾತ ಚಲನ ಚಿತ್ರನಟ ಮೈಸೂರು ರಮಾನಂದ, ಬೆಂಗಳೂರಿನ ಮಹಾಡ್ರೀಮ್ ಸಂಸ್ಥೆಯ ಎಂ. ಡಿ.ಪಿ.ಲಕ್ಷ್ಮಿ ರಾವ್, ಬಿ.ಲಕ್ಷೀದೇವಿ, ಕರ್ನಾಟಕ ರಾಜ್ಯ ಬರಹಗಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜಿ.ಅಗ್ರಹಾರ, ಎಸ್. ಯು.ಜೆ.ಎಂ. ಕಾಲೇಜು ಪ್ರಾಂಶುಪಾಲ ಹೆಚ್. ಮಲ್ಲಿಕಾರ್ಜುನ, ತಾಲ್ಲೂಕು ಅಧ್ಯಕ್ಷ ಕೆ. ಬಸವರಾಜ, ಕಾರ್ಯದರ್ಶಿ ಹೆಚ್.ಕೆ. ಮಂಜುನಾಥ, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಗಿರಜ್ಜಿ ನಾಗರಾಜ, ಚುಟುಕು ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಣಕಾರ ರಾಜಶೇಖರ, ಸಾಹಿತಿ ಡಿ.ರಾಮಣ್ಣ ಆಲಮರಸಿಕೇರಿ, ತೆಲಗಿ ಕೆ.ಎಸ್.ವೀರಭದ್ರಪ್ಪ, ನೇತ್ರಾ ಬಾಸೂರು, ಕೆ.ಕೊಟ್ರೇಶ್, ಟಿ.ಶಾಂತಲಿಂಗಪ್ಪ, ಗಾಟಿನ ಮಂಜುನಾಥ ಸೇರಿದಂತೆ ಇತರರು ಇದ್ದರು.

## ಚಿತ್ರದುರ್ಗ ಬಳಿ ಅಪಘಾತ: ಶಾಮನೂರಿನ ದಂಪತಿ ಸಾವು



ದಾವಣಗೆರೆ, ಸೆ.24- ಚಿತ್ರದುರ್ಗ ತಾಲ್ಲೂಕಿನ ತಮಟಕಲ್ಲು ಗ್ರಾಮದ ಸಮೀಪದ ರಾಷ್ಟ್ರೀಯ ಹೆದ್ದಾರಿ–48ರಲ್ಲಿ ಕಾರು ಮತ್ತು ಲಾರಿ ನಡುವೆ ಭಾನುವಾರ ಬೆಳಿಗ್ಗೆ 11 ಗಂಟೆ ಸುಮಾರಿಗೆ ಸಂಭವಿಸಿದ ಅಪಘಾತ ದಲ್ಲಿ ದಂಪತಿ ಮೃತಪಟ್ಟಿದ್ದಾರೆ.

ಶಾಮನೂರಿನ 5ನೇ ಕ್ರಾಸ್ ವಾಸಿ ಪೂಜಾರ್ ಕರಿಬಸಪ್ಪ (52) ಮತ್ತು ಸುಮಿತ್ರ ಕರಿಬಸಪ್ಪ (48) ಮೃತಪಟ್ಟವರು. ಇನ್ನೂ ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕರಿಬಸಪ್ಪ ಅವರು ದಾವಣಗೆರೆಯಿಂದ ಬೆಂಗಳೂರಿನತ್ತ ಹೊರಟಿದ್ದರು. ಚಿತ್ರದುರ್ಗ ಹೊರವಲಯದ ತಮಟಕಲ್ಲು ಸಮೀಪದ ಹೆದ್ದಾರಿಯಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಹಿಂಬದಿಯಿಂದ ಲಾರಿಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ. ಕರಿಬಸಪ್ಪ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಸಾವಿತ್ರಮ್ಮ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


**ಶಾಮನೂರಿನ ಶ್ರೀ ಮಾಲಸಾಂಬಾ ಗಂಗಮಾಳಮ್ಮ ದೇವಸ್ಥಾನದ ಗೌರವಾಧ್ಯಕ್ಷರಾದ ಪೂಜ್ಯ ಶ್ರೀಮತಿ ಗೌರಮ್ಮ ನಿಧನ**



ಶಾಮನೂರಿನ ಶ್ರೀ ಮಾಲಸಾಂಬಾ ಗಂಗಮಾಳಮ್ಮ ದೇವಸ್ಥಾನದ ಗೌರವಾಧ್ಯಕ್ಷರಾದ ಪೂಜ್ಯ **ಶ್ರೀಮತಿ ಗೌರಮ್ಮ** ಅವರು ದಿನಾಂಕ 24-09-2023ರ ಭಾನುವಾರ ರಾತ್ರಿ 10.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಐವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳು ಮತ್ತು ಭಕ್ತಾದಿಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 25-09-2023ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ಶಾಮನೂರಿನ ಶ್ರೀ ಮಾಲಸಾಂಬಾ ಗಂಗಮಾಳಮ್ಮ ದೇವಸ್ಥಾನದ ಪಕ್ಕದಲ್ಲಿರುವ ಶಿಬಾರದ ಬಳಿಯಲ್ಲಿ ನೆರವೇರಿಸಲಾಗುವುದು.

ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಮತ್ತು ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಅಪಾರ ಭಕ್ತಾದಿಗಳಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶಾಮನೂರಿನ ಶ್ರೀ ಮಾಲಸಾಂಬಾ ಗಂಗಮಾಳಮ್ಮ ದೇವಸ್ಥಾನ ಕಾರ್ಯಕಾರಿ ಸಮಿತಿ (ರಿ.)**
**ಶಾಮನೂರು (ಹೊಸ ಕ್ಯಾಂಪ್) - ದಾವಣಗೆರೆ.**

|| ಶ್ರೀ ಕಲ್ಲೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಸಿಟಿ, ಎಸ್.ಎಸ್. ಬಡಾವಣೆ, ಎ ಬ್ಲಾಕ್ ಇಂಡೋರ್ ಸ್ಟೇಡಿಯಂ ಎದುರು ವಾಸಿ.
ಶ್ರೀಮತಿ ದ್ರಾಕ್ಷಾಯಣಿ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ಶರಣ ಬಂಧುಗಳೇ ದಿನಾಂಕ : 21.09.2023ನೇ ಗುರುವಾರ ಬೆಳಗಿನ ಜಾವ 2.30ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಕಲ್ಲಪ್ಪ ಹೆಚ್. ಪರಂಗಿ**

(ರಿಯಲ್ ಎಸ್ಟೇಟ್) ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 25.09.2023ನೇ ಸೋಮವಾರ ಮಧ್ಯಾಹ್ನ 12.00 ಗಂಟೆಗೆ ಎಸ್. ಎಸ್. ಬಡಾವಣೆ, "ಎ" ಬ್ಲಾಕ್, ಇಂಡೋರ್ ಸ್ಟೇಡಿಯಂ ಎದುರುಗಡೆ ಇರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ :

**ಶ್ರೀಮತಿ ದ್ರಾಕ್ಷಾಯಣಿ ಮತ್ತು ಮಕ್ಕಳು, ಮೃತರ ಸಹೋದರರು, ಸಹೋದರಿಯರು, ಹೊಸರಿತ್ತಿ, ಪರಂಗಿ ವಂಶಸ್ಥರು ಹಾಗೂ ಬಂಧು-ಮಿತ್ರರು ಫೋ. : 88845 21778, 89518 75122**

ವಿ.ಸೂ. : ಈಗಾಗಲೇ ಆಹ್ವಾನವನ್ನು ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಪ್ರಥಮ ವರ್ಷದ ಪುಣ್ಯಸ್ಮರಣೆ**



**ದಿ. ಭಾಸ್ಕರ್ ಕೆ.ಹೆಚ್.**
ನಿಧನ : 29.09.2022

ನೀವು ನಮ್ಮನಗಲಿ ಇಂದಿಗೆ ಒಂದು ವರ್ಷವಾಯಿತು.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ..

**ದುಃಖತಪ್ತರು : ಶ್ರೀಮತಿ ಶಶಿಕಲಾ ಮಾಲೀಕರು ಹಾಗೂ ಸಿಬ್ಬಂದಿ ವರ್ಗ ಹೋಟೆಲ್ ಪುಜಾ ಇಂಟರ್‌ನ್ಯಾಷನಲ್, ಎಲಿಮೆಂಟ್ಸ್ ಬಾರ್ ರೆಸ್ಟೋರೆಂಟ್ ದಾವಣಗೆರೆ.**

**ಭಾವಪೂರ್ಣ ಶ್ರದ್ಧಾಂಜಲಿ**



ಶ್ರೀ ಈಶ್ವರ ದೇವಸ್ಥಾನದ ಅರ್ಚಕರಾದ
**ಶ್ರೀ ಪೂಜಾರ್ ಕರಿಬಸಪ್ಪ**
ಮತ್ತು ಅವರ ಧರ್ಮಪತ್ನಿ **ಶ್ರೀಮತಿ ಸುಮಿತ್ರ ಕರಿಬಸಪ್ಪ**
ಅವರು ದಿನಾಂಕ 24.09.2023ರಂದು ಅಕಾಲಿಕವಾಗಿ ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ದಯಾಮಯನಾದ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಈಶ್ವರ ಸ್ವಾಮಿ ದೇವಸ್ಥಾನ ಕಮಿಟಿ**
**ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.**


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಪದವಿ ದಿನ ಆಚರಿಸಿದ ಜಿಎಂ ಫಾರ್ಮಸಿ ಕಾಲೇಜ್



ದಾವಣಗೆರೆ, ಸೆ. 24- ಜಿ.ಎಂ. ಫಾರ್ಮಸಿ ಕಾಲೇಜಿನಲ್ಲಿ ಭಾನುವಾರ ಪದವಿ ದಿನ ಆಚರಿಸಲಾಯಿತು. ಬಿ.ಫಾರ್ಮಾ ಪ್ರಥಮ ಶೈಕ್ಷಣಿಕ ತಂಡವನ್ನು 'ನವ್ಯೆಕ್ಯರು' ಎಂದು ನಾಮಕರಿಸಿ ಅವರ ಸುಗಮ ಭವಿಷ್ಯಕ್ಕೆ ಶುಭ ಕೋರಲಾಯಿತು.

ಮುಖ್ಯ ಅತಿಥಿಗಳಾಗಿ ಶ್ರೀ ಶೈಲ ಎಜುಕೇಷನ್ ಟ್ರಸ್ಟಿ ಜಿ.ಎಸ್ ಅನಿತ್ ಕುಮಾರ್, ಬೆಂಗಳೂರಿನ ಇನ್ಜೆಕ್ಸ್ ಲ್ಯಾಬಿನ ಮುಖ್ಯ ವೈಜ್ಞಾನಿಕ ಅಧಿಕಾರಿ ಡಾ. ಸುಂದರಂ ಆರ್ ಹಾಗೂ ಜಿ.ಎಂ. ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಮಹೇಶಪ್ಪ ಹೆಚ್.ಡಿ ಆಗಮಿಸಿದ್ದರು. ಜಿಎಂಐಟಿ ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ, ಡಾ. ಗಿರೀಶ ಬೋಳಕಟ್ಟಿ, ಫಾರ್ಮಾಸಿಟಿಕ್ಸ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರತೀಕ್ಷಾ ಸಿ., ಡಾ. ಅಮಿತ್ ಕುಮಾರ್ ಬಿ., ರಾಕೇಶ್ ಎಸ್.ಎ. ಹಾಗೂ ಆಲಿಶಾ ಎಂ. ಜೈನ್ ಉಪಸ್ಥಿತರಿದ್ದರು.

# ಗಮನ ಸೆಳೆದ 'ವರ್ಣ ಗಣೇಶ' ಚಿತ್ರಕಲಾ ಪ್ರದರ್ಶನ



ದಾವಣಗೆರೆ, ಸೆ. 24- ದಾವಣಗೆರೆ ಚಿತ್ರಕಲಾ ಪರಿಷತ್ ಹಾಗೂ ಹಿಂದೂ ಯುವ ಶಕ್ತಿ ವತಿಯಿಂದ ನಗರದ ತೊಗಟವೀರ ಕಲ್ಯಾಣ ಮಂಟಪದಲ್ಲಿ ಆಯೋಜನೆಗೊಂಡಿದ್ದ 'ವರ್ಣ ಗಣೇಶ' ಚಿತ್ರಕಲಾ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

ಸಾರ್ವಜನಿಕ ಗಣೇಶೋತ್ಸವದ ನಿಮಿತ್ಯ ಚಿತ್ರಕಲೆಯ ಆಯಾಮ ನೀಡುವ ಒಂದು ಪ್ರಯತ್ನವನ್ನು ಚಿತ್ರಕಲಾ ಪರಿಷತ್ ಮಾಡಿದ್ದು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಆಸಕ್ತ ಚಿತ್ರ ಕಲಾವಿದರು ಅಪರೂಪದಲ್ಲಿ ಬಣ್ಣ ರೇಖೆಯನ್ನು ದುಡಿಸಿಕೊಂಡು ಚಿತ್ರ ರಚಿಸಿದ್ದಾರೆ. ಸುಮಾರು 46 ಕ್ಕೂ ಹೆಚ್ಚು ಚಿತ್ರಗಳು ಪ್ರದರ್ಶನಗೊಂಡಿದ್ದವು.

ಜಯರಾಜ್ ಚಿಕ್ಕಪಾಟೀಲ್, ಅಚ್ಯುತಾನಂದ ಬಿ., ಚಂದ್ರಶೇಖರ ಸಂಗಾ, ಎಂ. ರೂಪಶ್ರೀ, ಎ. ಮಹಲಿಂಗಪ್ಪ, ಆರ್. ಶಿವಕುಮಾರ್, ಡಿ.ಹೆಚ್. ಸುರೇಶ್, ಶಿವಶಂಕರ್ ಸುತಾರ, ರಂಗನಾಥ ಕುಲಕರ್ಣಿ, ದಾದು ಚಿತ್ರದುರ್ಗ, ಟಿ.ಎಂ. ವೀರೇಶ್, ಶಾಂತಯ್ಯ ಪರಡಿಮಠ, ದತ್ತಾತ್ರೇಯ ಭಟ್, ಪ್ರಶಾಂತ್ ಕಲಾಕುಟೀರ, ರವಿ ಹುದ್ದಾರ್, ಎಸ್.ಡಿ. ಲೋಕೇಶ್, ಎಸ್.ಬಿ. ಬಸವರಾಜ್, ಚಂದ್ರ ಶೇಖರ ತೆಗ್ಗಿನಮಠ, ಡಿ.ಕೆ. ಅಶೋಕ, ಹರಿಶ್ಚಂದ್ರ ಪತ್ತಾರ್, ಎಂ.ಸಿ. ದಿವಾಕರ್, ಸಂತೋಷ್ ಕುಲಕರ್ಣಿ, ಶಿವಕುಮಾರ್ ಸಿದ್ದಾಪುರ, ವಿನಯ್ ಸೊನ್ನದ್, ದರ್ಶಿನಿ ಕೆ. ಕಾಸಲ್ ಇವರ ಕುಂಚ ದಿಂದ ಉತ್ತಮ ಕಲಾಕೃತಿಗಳು ಮೂಡಿಬಂದಿವೆ.

'ವರ್ಣ ಗಣೇಶ' ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಉದ್ಯಮಿಗಳೂ, ಶ್ರೀಶೈಲ ಎಜುಕೇಶನ್ ಟ್ರಸ್ಟ್ ಖಜಾಂಚಿ ಜಿ. ಎಸ್. ಅನಿತ್ ಕುಮಾರ್ ಅವರು, ಕಲೆಗೆ ಬೆಲೆ ಕಟ್ಟಲಾಗದು. ಕಲಾವಿದರ ಕುಂಚದಿಂದ ಅತ್ಯುತ್ತಮ ಕಲಾಕೃತಿಗಳು ಅರಳಿದ್ದು, ಅವುಗಳನ್ನು ನೋಡಿ ಆಸ್ವಾದಿಸುವ ಮನಸ್ಸುಗಳು ಬೇಕಾಗಿವೆ ಎಂದರು. ಇಂದಿನ ಸ್ಪರ್ಧಾತ್ಮಕ ಮತ್ತು ತಾಂತ್ರಿಕ ಯುಗದಲ್ಲಿ ಇಂತಹ ನೈಜ ಕಲಾ ಪ್ರದರ್ಶನಗಳ ಅವಶ್ಯಕತೆ ಇದೆ ಎಂದು ಹೇಳಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ಕಲೆ ಮತ್ತು ಕಲಾವಿದರ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಅವಶ್ಯವಿದೆ. ಕಲೆಯ ಮೂಲಕ ನಾಡಿನ ಸಂಸ್ಕೃತಿ ಉಳಿಸಿ, ಬೆಳೆಸುವ ಕೆಲಸವನ್ನು ಕಲಾವಿದರು ಮಾಡುತ್ತಾ ಬಂದಿದ್ದಾರೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಮಾತನಾಡಿ, ಕಲಾವಿದರಿಗೆ ಸ್ಫೂರ್ತಿ ತುಂಬುವ ಕೆಲಸವನ್ನು ಕಲಾಸಕ್ತರು ಮಾಡಬೇಕಾಗಿದೆ. ಕಲಾವಿದರು ನಾಡಿನ ಕಲೆ, ಸಂಸ್ಕೃತಿಯನ್ನು ಪೋಷಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆಂದರು.

ಪಾಲಿಕೆ ಮಾಜಿ ಸದಸ್ಯ ಪಿ.ಸಿ. ಮಹಾಬಲೇಶ್ವರ, ಚಿತ್ರಕಲಾ ಪರಿಷತ್ ಕಾರ್ಯದರ್ಶಿ ಡಿ. ಶೇಷಾಚಲ, ಕಲಾವಿದರಾದ ದತ್ತಾತ್ರೇಯ ಭಟ್, ಶಾಂತಯ್ಯ ಪರಡಿಮಠ ಮತ್ತಿತರರು ಉಪಸ್ಥಿತರಿದ್ದರು.

ಅಚ್ಯುತಾನಂದ ಪ್ರಾರ್ಥಿಸಿದರು. ದಾವಣಗೆರೆ ಚಿತ್ರಕಲಾ ಪರಿಷತ್ ಅಧ್ಯಕ್ಷ ಸದಾನಂದ ಹೆಗಡೆ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದು. ಪಿಸಿ. ಶ್ರೀನಿವಾಸ್ ನಿರೂಪಿಸಿದರು.

# ನಗರದಲ್ಲಿ ರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣವಾಗಲಿ : ಶಾಸಕ ಕೆ.ಎಸ್.ಬಸವಂತಪ್ಪ

### ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ



ದಾವಣಗೆರೆ, ಸೆ.24- ದಾವಣಗೆರೆಯಲ್ಲಿ ರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣವಾಗಲಿ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಆಶಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗಲ್ಲಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ನಗರದ ಸಮೀಪ ಜಮೀನು ಪಡೆದು ರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗುವಂತೆ ಕ್ರೀಡಾ ಸಚಿವರಿಗೆ ಮನವಿ ಮಾಡಲಾಗುವುದು ಎಂದ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರೂ ಸಹ ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಕ್ರೀಡಾ ಕ್ಷೇತ್ರದಲ್ಲಿ ದಾವಣಗೆರೆಗೆ ಉತ್ತಮ ಹೆಸರಿದೆ.

ಈ ಹಿಂದೆ ಯುವಜನ ಸೇವಾ ಇಲಾಖೆಯ ಸಚಿವರಾಗಿದ್ದಾಗ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ನಗರದಲ್ಲಿ ಉತ್ತಮ ಈಜುಕೊಳ, ಕ್ರೀಡಾಂಗಣ ನಿರ್ಮಿಸಿದ ಹೆಗ್ಗಳಿಕೆ ಅವರದ್ದು ಎಂದರು.

ಕ್ರೀಡೆ ಮತ್ತು ಪಠ್ಯ ಎರಡರಲ್ಲೂ ತೊಡಗಿಸಿಕೊಂಡಾಗ ಮಾತ್ರ ಸಾಧನೆ ತೀರ್ಪುಗಾರರು ತಾರತಮ್ಯ ಮಾಡದೆ ತೀರ್ಪು ನೀಡಬೇಕು ಎಂದು ಹೇಳಿದರು.

ಹರಿಹರ ಶಾಸಕ ಬಿ.ಪಿ. ಹರೀಶ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಕೆ.ಆರ್. ಜಯಲಕ್ಷ್ಮೀ ಬಾಯಿ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನಗರದ ನ್ಯಾಷನಲ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ



ದಾವಣಗೆರೆ, ಸೆ.24- ನಗರದ ಯುನೈಟೆಡ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಮತ್ತು ಅರ್ಥ ಬದ್ಧವಾಗಿ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಸಹಾಯಕ ಉಪನ್ಯಾಸಕ ಡಾ.ಖಲೀಲ್ ಅಹಮದ್ ಇವರು ಶಿಕ್ಷಕರು ಮಹತ್ತರ ಜವಾಬ್ದಾರಿಯ ಕೆಲಸ ಅನೇಕ ನಿದರ್ಶವನ್ನು ತಿಳಿಸಿದರು.

ಮತ್ತೋರ್ವ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಉಪನ್ಯಾಸಕರಾದ ಅಜೀಜಾ ಫಾಹಿಮ್ ಉನ್ನೀಸಾ ಇವರು ಕಾರ್ಯಕ್ರಮ ಉದ್ದೇಶಿಸಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜೀವನದಲ್ಲಿ ಮಾಡಬೇಕಾದ ಕೆಲಸ ಭವಿಷ್ಯದ ಬಗ್ಗೆ ಕನಸು ಕಾಣುವ ಮತ್ತು ನನಸು ಮಾಡಿಕೊಳ್ಳುವ ಹಾದಿಯಲ್ಲಿ ಹೀಗೆ ಜೀವಿಸಬೇಕು ಎಂಬುದನ್ನು ತಿಳಿಸಿದರು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಿ.ದಾದಾಪೀರ್ ಅಧ್ಯಕ್ಷತೆ ವಹಿಸಿದ್ದರು.

ಶಾಲೆಯ ಪ್ರಾಂಶುಪಾಲರಾದ ಎಂ.ವಾಸಿಂ ಪಾಷಾ ಮಾತನಾಡಿ, ತಾವು ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಲು ಮೂಲ ಕಾರಣ ಶಿಕ್ಷಕರು ಎಂಬ ಮಾತನ್ನು ಮಕ್ಕಳಿಗೆ ಮನವರಿಕೆ ಮಾಡಿದರು. ಭವಿಷ್ಯದಲ್ಲಿ ಯಾವ ಮಕ್ಕಳು ಯಾವ ಹುದ್ದೆಯಲ್ಲಿ ಇರಬಹುದೆಂಬುದನ್ನು ಮಾರ್ಮಿಕವಾಗಿ ತಿಳಿಸಿದರು.

# ಬದುಕಿನ ಜೊತೆ ಬಾಳುವುದು ಕಲಿಯಿರಿ



### ಇಷ್ಟಲಿಂಗ ಪೂಜೆಯ ಮಹತ್ವ ಅರಿಯಿರಿ

ಇಷ್ಟಲಿಂಗ ಪೂಜೆಗೆ ಇರುವ ಮಹತ್ವವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದು ಶಿವನಳ್ಳಿ ರಮೇಶ್ ಹೇಳಿದರು.

ಜೀವನದಲ್ಲಿ ಸಮಸ್ಯೆಗಳು, ಕಷ್ಟಗಳು ಎದುರಾದಾಗ ಲಿಂಗಪೂಜೆ ಮಾಡುವುದರಿಂದ ಅವುಗಳಿಂದ ಮುಕ್ತಿ ಹೊಂದಬಹುದು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಲಿಂಗದೀಕ್ಷೆ ಪಡೆದು ನಿತ್ಯ ಲಿಂಗಪೂಜೆ ಮಾಡುವಂತೆ ಸಲಹೆ ನೀಡಿದರು.

ದಾವಣಗೆರೆ, ಸೆ. 24- ಜೀವನದಲ್ಲಿ ಬದುಕುವುದೇ ಬೇರೆ, ಬಾಳುವುದೇ ಬೇರೆ. ಎಲ್ಲರೂ ಬದುಕುತ್ತಾರೆ. ಆದರೆ ಶಿಕ್ಷಣ, ಲೌಕಿಕ ಜ್ಞಾನ, ಸಂಸ್ಕಾರ ಕಲಿತವರು ಮಾತ್ರ ಬಾಳುತ್ತಾರೆ. ಹೀಗಾಗಿ ನೀವು ಬಾಳುವುದನ್ನು ಕಲಿಯಿರಿ ಎಂದು ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಳ್ಳಿ ರಮೇಶ್ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಸಾದರ ನೌಕರರ ಬಳಗದ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಜೀವನದ ಮಹತ್ವದ ಘಟ್ಟ. ಈಗ ಪರಿಶ್ರಮದಿಂದ ಹೆಚ್ಚು ಅಂಕ ಗಳಿಸಿದ್ದೀರಿ.

ಮುಂದೆ ಲೌಖಿಕವಾಗಿಯೂ ಮುಂದೆ ಬನ್ನಿ ಎಂದು ಕರೆ ನೀಡಿದರು.

ಹೇಳಿಕೊಳ್ಳುವಂತಹ ಸಾಧನೆ ಮಾಡಿದ ಕಾರಣ ಕುಟುಂಬದ ಹಿರಿಯರ ಹೆಸರುಗಳೇ ನಮಗೆ ನೆನಪಿರುವುದಿಲ್ಲ. ಕಾರಣ ಮುಂದಿನ ದಿನಗಳಲ್ಲಿ ನೀವು ಕುಟುಂಬ, ಊರು ಹಾಗೂ ನಾಡಿನ ಪ್ರತಿಭೆಗಳಾಗಿ ಹೊರ ಬನ್ನಿ ಎಂದು ಆಶಿಸಿದರು.

ತಾಲ್ಲೂಕು ಪಂಚಾಯ್ತಿ ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿ ಎಲ್.ಎಸ್. ಪ್ರಭುದೇವ್, ಸಾದರ ನೌಕರರ ಬಳಗ, ಬಸವ ತತ್ವ ಪ್ರಚಾರಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಹೇಳಿದರು.

ಬಳಗ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ನೀಡಿದರೆ ಸಹಕಾರ ನೀಡುವುದಾಗಿ ಹೇಳಿದ ಅವರು, ಸಾಣೇಹಳ್ಳಿಯಲ್ಲಿ ಪ್ರತಿ ತಿಂಗಳು ಲಿಂಗದೀಕ್ಷೆ ನಡೆಯುತ್ತದೆ.

ಅಲ್ಲಿಗೆ ಜನರನ್ನು ಕರೆದೊಯ್ಯುವ ವ್ಯವಸ್ಥೆನ್ನು ಬಳಗ ಕಲ್ಪಿಸಿದರೆ ಅದರ ಖರ್ಚು-ವೆಚ್ಚ ಭರಿಸುವುದಾಗಿ ಹೇಳಿದರು.

ಯುವ ಜನತೆ ಶೈಕ್ಷಣಿಕ ಸಾಧನೆ ಜೊತೆಗೆ ಕಾನೂನು ಪಾಲನೆ ಮಾಡಬೇಕು. ಆಗ ಮಾತ್ರ ಪರಿಪೂರ್ಣ ವ್ಯಕ್ತಿಗಳಾಗುತ್ತೀರಿ ಎಂದರು. ಪೋಷಕರು ತಮ್ಮ ಬಯಕೆಗಳನ್ನು ವಿದ್ಯಾರ್ಥಿಗಳ ಮೇಲೆ ಹೇರದೆ, ಅವರಿಗಿಷ್ಟದ ವಿಷಯ ಕಲಿಯಲು ಪ್ರೋತ್ಸಾಹಿಸಬೇಕು.

ಸ್ಕೌಟ್ ಅಂಡ್ ಗೈಡ್ಸ್ ಗಳಲ್ಲಿ ಭಾಗವಹಿಸಲು ನೆರವಾಗಬೇಕು ಎಂದು ಹೇಳಿದರು. ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕರಿಸಲಾಯಿತು.

ಸಾದರ ನೌಕರರ ಬಳಗದ ಅಧ್ಯಕ್ಷ ಕೆ.ನಾಗಪ್ಪ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ನಿಕಟಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ, ಸಂಗಮೇಶ ಗೌಡ್ರು ಉಪಸ್ಥಿತರಿದ್ದರು. ಬಳಗದ ನಿರ್ದೇಶಕ ಸಿ.ಜಿ. ಜಗದೀಶ್ ಕೂಲಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಗದೀಶ್ ಸ್ವಾಗತಿಸಿದರು.

## ನಗರದಲ್ಲಿ ಇಂದು ವಾಗೀಶ ಪಂಡಿತಾರಾಧ್ಯ, ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರ ಪುಣ್ಯಾರಾಧನೆ

ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ಪುಣ್ಯಾರಾಧನಾ ಸೇವಾ ಸಮಿತಿ, ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರ ಧರ್ಮಸಂಸ್ಥೆ ಇವರ ವತಿಯಿಂದ ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳ 37ನೇ ವಾರ್ಷಿಕ ಪುಣ್ಯಾರಾಧನೆ ಮತ್ತು ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 12ನೇ ವರ್ಷದ ಸ್ಮರಣೋತ್ಸವ ಹಾಗೂ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯರ ದ್ವಾದಶ ಪೀಠಾರೋಹಣ ವರ್ಧಂತಿ ಮಹೋತ್ಸವ, ಜನಜಾಗೃತಿ ಧರ್ಮ ಸಮ್ಮೇಳನ ಕಾರ್ಯಕ್ರಮವು ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ ಇಂದು ಮತ್ತು ನಾಳೆ ನಡೆಯಲಿದೆ.

ಇಂದು ಸಂಜೆ 6 ಗಂಟೆಗೆ ನಡೆಯುವ ಭಾವೈಕ್ಯ, ಜನಜಾಗೃತಿ, ಧರ್ಮ ಸಮಾರಂಭದ ಸಾನ್ನಿಧ್ಯವನ್ನು ಶ್ರೀಶೈಲ ಪೀಠದ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯರು ವಹಿಸಲಿದ್ದು, ಹೊನ್ನಾಳಿ ಹಿರೇಕಲ್ಮಠದ ಡಾ. ಒಡೆಯರ ಶಿವಪ್ರಕಾಶ ಶಿವಾಚಾರ್ಯ ಅಧ್ಯಕ್ಷತೆ ವಹಿಸುವರು.

ಹುಣಸಘಟ್ಟದ ಗುರುಮೂರ್ತಿ ಶಿವಾಚಾರ್ಯ ಶ್ರೀಗಳು ಮತ್ತು ಒಡೆಯರ ಶಿವಪ್ರಕಾಶ ಶಿವಾಚಾರ್ಯ ಶ್ರೀಗಳ ಸಮ್ಮುಖದಲ್ಲಿ ಜರುಗುವ ಕಾರ್ಯಕ್ರಮವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ವಿಪ ಸದಸ್ಯ ಕೆ.ಎಸ್. ನವೀನ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.





'ಸಮಾಜ ಮತ್ತು ಪಂಚಪೀಠಗಳ ಮಹತ್ವದ ಕುರಿತು ವ್ಯಂಗ್ಯ ಚಿತ್ರಕಾರ ಹೆಚ್.ಬಿ. ಮಂಜು ನಾಥ್ ಉಪನ್ಯಾಸ ನೀಡಲಿದ್ದಾರೆ.

ನಾಳೆ ಮಂಗಳವಾರ ಸಂಜೆ 6 ಗಂಟೆಗೆ ನಡೆಯುವ ಧರ್ಮಸಭೆ ಕಾರ್ಯಕ್ರಮದಲ್ಲಿ ಉಜ್ಜಯಿನಿ ಮಹಾಪೀಠದ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಶ್ರೀಗಳು ಹಾಗೂ ಶ್ರೀಶೈಲ ಪೀಠದ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶ್ರೀಗಳು ಸಾನಿಧ್ಯ ವಹಿಸಲಿದ್ದು, ರಾಮಘಟ್ಟದ ಶ್ರೀ ರೇವಣಸಿದ್ಧ ಶಿವಾಚಾರ್ಯ ಶ್ರೀಗಳು ಅಧ್ಯಕ್ಷತೆ ವಹಿಸುವರು.

ರಾಚೋಟಿ ಶಿವಾಚಾರ್ಯ ಶ್ರೀ ಹಾಗೂ ರೇಣುಕ ಶಿವಾಚಾರ್ಯ ಸ್ವಾಮೀಜಿಯವರ ಸಮ್ಮುಖದಲ್ಲಿ ಜರುಗುವ ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಉದ್ಯಮಿ ಎಸ್.ಎಸ್. ಗಣೇಶ್, ಶಾಸಕ ಶಿವಗಂಗಾ ಬಸವರಾಜ್, ಮಾಜಿ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ರಾಣೇಬೆನ್ನೂರು, ಸೆ. 24 - ತಾಲ್ಲೂಕಿನ ಕುರುಬ ಸಮಾಜದ ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ ನಡೆಸಲಾಗುತ್ತಿದ್ದು, ಎಸ್.ಎಸ್.ಎಲ್.ಸಿ., ಪಿಯೂಸಿ ಹಾಗೂ ಪದವಿ ಪಡೆದ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಸಂಪರ್ಕಿಸಿ : 9964030702, 9449422854, 9886963393.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ಥಿರ ಸೊತ್ತು ನಿವೇಶನವು ನನ್ನ ಕಕ್ಷಿಗಾರರಾದ ಶ್ರೀಮತಿ ಎಸ್.ಪಿ. ಪುಷ್ಪಲತಾ ಕೋಂ: ಶ್ರೀ ಎಸ್.ಎನ್. ಪ್ರಕಾಶ್, ಡೋರ್ ನಂ.3876/4, 7ನೇ ಕ್ರಾಸ್, 11ನೇ ಮೇನ್, ಎಂಸಿಸಿ 'ಬಿ' ಬ್ಲಾಕ್ ದಾವಣಗೆರೆ ಇವರ ಸಂಪೂರ್ಣ ಮಾಲೀಕತ್ವಕ್ಕೆ ಸೇರಿದ ಸ್ವತ್ತಾಗಿದ್ದು ಸದರಿ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ ಹಾಗೂ ಮಾಲೀಕತ್ವ ಇರುವುದಿಲ್ಲ.

ಹಾಗಿದ್ದರೂ ಸಹ ಕೆಲವು ವ್ಯಕ್ತಿಗಳು ದುರುದ್ದೇಶದಿಂದ ಸೃಷ್ಟಿಸಿದ ಹಾಗೂ ನಕಲಿ ಮತ್ತು ಅಕ್ರಮ ದಾಖಲೆಗಳನ್ನು ತೋರಿಸಿ ಷೆಡ್ಯೂಲ್ ಸ್ವತ್ತು ತಮ್ಮದೆಂದು ಮಾರಾಟ, ಕ್ರಯ, ಭೋಗ್ಯ ವಗೈರೆ ರೀತಿಯ ವ್ಯವಹಾರಗಳನ್ನು ಮಾಡಲು ಹೊರಟಿದ್ದಾರೆಂದು ನನ್ನ ಕಕ್ಷಿಗಾರರಿಗೆ ತಿಳಿದು ಬಂದಿದೆ. ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ನನ್ನ ಕಕ್ಷಿಗಾರರನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು ಅಧಿಕಾರ ಹಾಗೂ ಮಾಲೀಕತ್ವ ಇರುವುದಿಲ್ಲ. ಕಾರಣ ಈ ಸಾರ್ವಜನಿಕ ಪ್ರಕಟಣೆ ನೀಡಲಾಗಿದೆ.

ಸಾರ್ವಜನಿಕರು ಯಾರೂ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಬಗ್ಗೆ ಬೇರೆ ಯಾರ ಜೊತೆಯೂ ಯಾವುದೇ ರೀತಿಯ ಕ್ರಯ, ಖರೀದಿ ಅಥವಾ ಇನ್ಯಾವುದೇ ರೀತಿಯ ವ್ಯವಹಾರವನ್ನು ಮಾಡಕೂಡದು. ಮಾಡಿದಲ್ಲಿ ಅವರೇ ಈ ವ್ಯವಹಾರಕ್ಕೆ ಜವಾಬ್ದಾರರಾಗುತ್ತಾರೆಯೇ ವಿನಃ ಆ ರೀತಿಯ ಯಾವುದೇ ವ್ಯವಹಾರ ನನ್ನ ಕಕ್ಷಿಗಾರರನ್ನು ಎಷ್ಟು ಮಾತ್ರಕ್ಕೂ ಪ್ರತಿಬಂಧಿಸುವುದಿಲ್ಲ ಮತ್ತು ಆ ರೀತಿಯ ವ್ಯವಹಾರ ನನ್ನ ಕಕ್ಷಿಗಾರರಿಗೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಎಷ್ಟು ಮಾತ್ರಕ್ಕೂ ಅನ್ವಯಿಸುವುದಿಲ್ಲ ಹಾಗೂ ಭಾದಿಸುವುದಿಲ್ಲ. ಕಾರಣ ಸಾರ್ವಜನಿಕರು ಯಾರೂ ಷೆಡ್ಯೂಲ್ ಸ್ವತ್ತಿನ ಬಗ್ಗೆ ಬೇರೆ ಯಾರೊಡನೆಯೂ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು, ಮಾಡಿದಲ್ಲಿ ಅವರೇ ಜವಾಬ್ದಾರರಾಗುತ್ತಾರೆಂದು ಈ ಮೂಲಕ ಎಚ್ಚರಿಸಲಾಗಿದೆ.

**ಷೆಡ್ಯೂಲ್** : ದಾವಣಗೆರೆ ತಾಲ್ಲೂಕು, ಉಪನೋಂದಣಾಧಿಕಾರಿಗಳವರ ಕಛೇರಿ, ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ನಗರಸಭೆಗೆ ಸೇರಿದ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ರೀ. ಸರ್ವೆ ನಂ.78/1ಪಿ1ಈ3, ಉಳ್ಳ ವಿಸ್ತೀರ್ಣ ಎಕರೆ ಇಲ್ಲಾ, ಗುಂಟೆ ಐದು (00- 05) ಉಳ್ಳ ಪ್ರದೇಶವನ್ನು ಈ ಹಿಂದೆ ಚಿತ್ರದುರ್ಗ ವಿಶೇಷ ಜಿಲ್ಲಾಧಿಕಾರಿಗಳವರಿಂದ ನಂ.ಎಎಲ್‌ಎನ್.ಎಸ್. ಆರ್.349/84-85ರ ಆರ್ಡರ್ ಮೇರೆಗೆ ದಿನಾಂಕ: 2.4.1985ರಂದು ವಾಸೋಪಯೋಗಕ್ಕಾಗಿ ಅಲಿನೇಷನ್ ಆಗಿರುವ ಪ್ರದೇಶದಲ್ಲಿ ಸೈಟುಗಳಾಗಿ ವಿಂಗಡಿಸಿ ಪ್ಲಾನ್ ತಯಾರಿಸಿ, ಸದರಿ ಪ್ಲಾನನ್ನು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ ಇವರಿಂದ ಅಪ್ರೂವಲ್ ಮಾಡಿಸಿ, ಸದರಿ ಸೈಟುಗಳಿಗೆ ಈ ಹಿಂದೆ ಶಾಬನೂರು ಪಂಚಾಯ್ತಿ ಡೋರ್ ನಂಬರ್ ಸಹ ದಾಖಲು ಮಾಡಿಸಿದ್ದು, ಇತ್ತೀಚೆಗೆ ದಾವಣಗೆರೆ ನಗರಸಭೆಗೆ ಸೇರ್ಪಡೆಯಾಗಿರುವ ಸೈಟುಗಳ ಪೈಕಿ ಕ್ರಯಕ್ಕೆ ಕೊಟ್ಟಿರುವ ಡೋರ್ ನಂಬರ್ 4794, ಖಾತೆ ನಂಬರ್ 1584 ಇದರ ಅಳತೆ:- ಪೂರ್ವ-ಪಶ್ಚಿಮ 45 ಅಡಿ, ಉತ್ತರ-ದಕ್ಷಿಣ 50 ಅಡಿ (45 X 50 ಅಡಿ) ಉಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ :- ಪೂರ್ವಕ್ಕೆ - ಪಿಸಾಳೆಯವರ ಬಾಬ್ತು ಸೊತ್ತು, ಪಶ್ಚಿಮಕ್ಕೆ-30 ಅಡಿ ಅಗಲದ ರಸ್ತೆ, ಉತ್ತರಕ್ಕೆ- ಶಾಂತವೀರಪ್ಪನವರ ಸೊತ್ತು, ದಕ್ಷಿಣಕ್ಕೆ- ಡೋರ್ ನಂಬರ್ 3368/ಪಿ ರಲ್ಲಿರುವ ವಾಸದ ಮನೆ.

**ಮಲ್ಲಿಕಾರ್ಜುನ ಕಣವಿ,** ಬಿ.ಎ. ಎಲ್‌ಎಲ್.ಎಂ.
ವಕೀಲರು, ನಂ.5 & 6, 1ನೇ ಅಂತಸ್ತು,
ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್,
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು,
ಪಿ.ಬಿ. ರಸ್ತೆ, ದಾವಣಗೆರೆ-577006.

**ದಾವಣಗೆರೆ**
**ದಿನಾಂಕ : 24-09-2023**


# 'ಸರ್ ಎಂ.ವಿ' ನಾಡಿನ ಮಹತ್ವದ ಚಿಂತನೆಗಳ ಪ್ರೇರಕ ಶಕ್ತಿ

## ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಇಂಜಿನಿಯರ್ ಎಲ್.ಎಸ್. ಪ್ರಭುದೇವ್



ದಾವಣಗೆರೆ, ಸೆ.24- ನೂರಾ ಎರಡು ವರ್ಷಗಳ ತುಂಬು ಬದುಕನ್ನು ಕರ್ಮಯೋಗಿ ಯಂತೆ ಬಾಳಿದ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯನವರು ಈ ನಾಡಿನ ಮಹತ್ವದ ಚಿಂತನೆಗಳ, ಯೋಜನೆಗಳ ಪ್ರೇರಕ ಶಕ್ತಿ ಯಾಗಿದ್ದವರು ಎಂದು ವಿಶ್ರಾಂತ ಕಾರ್ಯ ನಿರ್ವಾಹಕ ಇಂಜಿನಿಯರ್ ಎಲ್. ಎಸ್. ಪ್ರಭುದೇವ್ ಹೇಳಿದರು.

ನಗರದ ಬಿಇಎ ಶಿಕ್ಷಣ ಮಹಾವಿದ್ಯಾಲಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬಿಇಎ ಶಿಕ್ಷಣ ಮಹಾವಿದ್ಯಾಲಯಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ. ಸರ್ ಎಂ. ವಿ. ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ 'ಭಾರತರತ್ನ ಸರ್ ಎಂ.ವಿಶ್ವೇಶ್ವರಯ್ಯ' ವಿಷಯ ಕುರಿತಾಗಿ ಅವರು ಉಪನ್ಯಾಸ ನೀಡಿದರು.

ಇಂದು ನಮ್ಮ ಕನ್ನಡದ ನೆಲ, ವಿಜ್ಞಾನ, ತಂತ್ರಜ್ಞಾನಗಳ ತವರೂರಾಗಿದೆ. ಇದರ ಬುನಾದಿಯಲ್ಲಿ ವಿಶ್ವೇಶ್ವರಯ್ಯನವರ ಅಗಾಧ ಪರಿಶ್ರಮ, ದೂರದೃಷ್ಟಿ, ಸಮಾಜ ಮುಖಿ ಯೋಜನೆಗಳಿವೆ. ಅವರ ಪ್ರತಿಭೆಯನ್ನು ಮನಗಂಡು ಅವರೊಡನೆ ಸಹಕರಿಸಿದ, ಅವರ ಯೋಜನೆಗಳನ್ನು ಬೆಂಬಲಿಸಿದ ಮೈಸೂರು ಮಹಾರಾಜರು, ದಿವಾನರುಗಳ ಸಹಯೋಗವು ಇದೆ. ನಿಜವಾದ ಅರ್ಥದಲ್ಲಿ ವಿಶ್ವೇಶ್ವರಯ್ಯ ಮೈಸೂರು ಸಂಸ್ಥಾನದ ಭಾಗ್ಯವಿಧಾತ, ಆಧುನಿಕ ಮೈಸೂರಿನ ನಿರ್ಮಾತೃವಾಗಿದ್ದಾರೆ ಎಂದು ಪ್ರಭುದೇವ್ ಬಣ್ಣಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, 'ಯಾವುದೇ ಕೆಲಸ ಕೀಳಲ್ಲ, ನಿನ್ನ ಕೆಲಸ ಈ ರಸ್ತೆಯ ಈ ಭಾಗವನ್ನು ಗುಡಿಸುವುದಾಗಿದ್ದರೆ, ಜಗತ್ತಿನ ಅತ್ಯಂತ ಸ್ವಚ್ಛ ರಸ್ತೆಯಾಗುವಂತೆ ಗುಡಿಸು. ಅದೃಷ್ಟ ಎನ್ನುವುದು ದೇವರ ಕೈಯಲ್ಲಿ ನಿಷ್ಕ್ರಿಯವಾಗಿರುವ ಸಾಧನವಲ್ಲ. ನಮ್ಮ ಡೆಸ್ಟಿನಿ ನಮ್ಮ ವಿಧಿ - ಮನುಷ್ಯನ ಕೈಯಲ್ಲಿರುವ ಸಾಧನ' ಎಂದು ಹೇಳುತ್ತಿದ್ದವರು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಕಾರಣ ಕರ್ತರೂ ಆಗಿದ್ದಾರೆ ಎಂದರು.

ಬಿಇಎ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎ.ಜೆ. ನೀತ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ, ವಿಶ್ವೇಶ್ವರಯ್ಯನವರ ಸಾಧನೆ ಕುರಿತಾಗಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿದ ಲೋಕೋಪಯೋಗಿ ಇಲಾಖೆಯ ವಿಶ್ರಾಂತ ಸಹಾಯಕ ಕಾರ್ಯಪಾಲಕ ಅಭಿಯಂತರ ವೈ.ಎನ್. ರಂಗನಾಥ್ ಮಾತನಾಡುತ್ತಾ, ವಿಶ್ವೇಶ್ವರಯ್ಯನವರಲ್ಲಿ ಇದ್ದಂತಹ ದೇಶಭಕ್ತಿ, ಕಾರ್ಯತತ್ಪರತೆ ನಮ್ಮೆಲ್ಲರಿಗೂ ಆದರ್ಶಪ್ರಾಯ ಎಂದು ತಿಳಿಸಿದರು.

ಮಹಲಿಂಗರಂಗ ಪ್ರಶಸ್ತಿ ಪುರಸ್ಕೃತ ಬಾ.ಮ. ಬಸವರಾಜಯ್ಯ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ, ಎಚ್. ಎನ್. ಶಿವಕುಮಾರ್, ಎ. ಮಹಾಲಿಂಗಪ್ಪ, ಬಿ. ಕೆ. ರೇಣುಕಾ ಮೂರ್ತಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬಿಇಎ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿ ತನುಶ್ರೀ ಪ್ರಾರ್ಥನೆಯನ್ನು, ಕಲ್ಮನೆ ಉದಯ್ ಕುಮಾರ್ ಸ್ವಾಗತವನ್ನು, ಜಾಸ್ಮಿನ್ ತಾಜ್ ತರ್ನಾಳ್ ನಿರೂಪಣೆ ಮಾಡಿದರು. ನಿರೂಪ ಬಿ. ವಂದಿಸಿದರು.

# ಇಂದು ದಾವಣಗೆರೆ ಬಂದ್‌ಗೆ ಕರೆ

(1ನೇ ಪುಟದಿಂದ) ಯಾವುದೇ ಶಾಲಾ-ಕಾಲೇಜು, ಸರ್ಕಾರಿ/ಖಾಸಗಿ ಸಂಸ್ಥೆಗಳನ್ನು ಮತ್ತು ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸುವಂತಿಲ್ಲ. ಸಾರ್ವಜನಿಕರ ಜನ-ಜೀವನಕ್ಕೆ, ವಾಹನ ಮತ್ತು ಆಸ್ತಿ-ಪಾಸ್ತಿ ನಾಶ ಮಾಡುವಂತಿಲ್ಲ

ಯಾವುದೇ ರಸ್ತೆ ತಡೆಗೆ ಹಾಗೂ ವಾಹನ ಅಡ್ಡಗಟ್ಟುವುದಕ್ಕೆ ಅವಕಾಶ ಇಲ್ಲ ಮತ್ತು ಸಾರ್ವಜನಿಕ ಸಂಚಾರಕ್ಕೆ ಅಡ್ಡಿಪಡಿಸುವಂತಿಲ್ಲ. ಒಂದು ವೇಳೆ ಪ್ರಯತ್ನಿಸಿದ್ದಲ್ಲಿ ಕಾನೂನು ರೀತ್ಯ ಕ್ರಮವಹಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ತುರ್ತು ಸೇವೆಗಳಿಗೆ ಮತ್ತು ಅಗತ್ಯ ವಸ್ತುಗಳ ಸಾಗಾಣಿಕೆ ಅಡ್ಡಿಪಡಿಸುವಂತಿಲ್ಲ. ಬಂದ್ ಸಂಬಂಧ ರಸ್ತೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಟಯರ್‌ಗಳನ್ನು ಹಾಕಿ ಹಚ್ಚಲು ಮತ್ತು ಯಾವುದೇ ಪ್ರತಿಕೃತಿಗಳನ್ನು ದಹನ ಮಾಡಲು ಅವಕಾಶವಿರುವುದಿಲ್ಲ. ಬಂದ್ ಹೆಸರಿನಲ್ಲಿ ಯಾರೇ ಆಗಲಿ ಕಾನೂನು ಕೈಗೆ ತೆಗೆದುಕೊಂಡರೆ ಅವರ ವಿರುದ್ಧ ಪೊಲೀಸ್ ಇಲಾಖೆ ಕಾನೂನು ರೀತ್ಯ ಕ್ರಮಕೈಗೊಳ್ಳಲಿದೆ.

ಬಂದ್ ಸಂಬಂಧ ಸುಳ್ಳು ವದಂತಿ ಹಬ್ಬಿಸುವವರ ಮೇಲೆ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸಂದೇಶ ಅಥವಾ ಪೋಸ್ಟರ್‌ಗಳನ್ನು ಹಾಕುವವರ ಮೇಲೆ ಕಟ್ಟು ನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು ಎಸ್ಪಿ ಹೇಳಿದ್ದಾರೆ. ಬಂದ್ ಸಂಬಂಧ ಮುನ್ನೆಚ್ಚರಿಕಾ ಕ್ರಮವಾಗಿ ಜಿಲ್ಲಾ ಪೊಲೀಸ್ ವತಿಯಿಂದ, ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿ, ಸಿಬ್ಬಂದಿ, ಸಶಸ್ತ್ರ ತುಕಡಿಗಳನ್ನು ನಿಯೋಜಿಸಲಾಗಿದೆ ಎಂದು ಎಸ್ಪಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಸುಂದರ ಜೀವನ ರೂಪಿಸಿಕೊಳ್ಳಲು ಶಿಕ್ಷಣ ಬೇಕು



**ಭದ್ರಾ ಕಾಲೇಜ್‌ನ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ವೆಂಕಟೇಶ್ ಬಾಬು**

ದಾವಣಗೆರೆ, ಸೆ.24- ಸಮಾಜದಲ್ಲಿ ಗೌರವಯುತವಾಗಿ ಬಾಳಲು, ಸುಂದರ ಜೀವನ ರೂಪಿಸಿಕೊಳ್ಳಲು, ತಂದೆ-ತಾಯಿಗಳ ಆಸೆಗಳನ್ನು ಈಡೇರಿಸಲು ಮತ್ತು ಭವಿಷ್ಯಕ್ಕಾಗಿ ಕಷ್ಟ ಪಟ್ಟಾದರೂ ಸರಿ, ಇಷ್ಟ ಪಟ್ಟಾದರೂ ಸರಿ ನೀವು ಓದಲೇಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ವೆಂಕಟೇಶ್ ಬಾಬು ಹೇಳಿದರು.

ನಗರದ ಭದ್ರಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಓರಿಯೆಂಟೇಷನ್ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿ ಜೀವನ ಬಂಗಾರದಂತಹ ಜೀವನ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸ್ಪಷ್ಟವಾದ ಗುರಿಯೊಂದಿಗೆ ಸತತ ಪ್ರಯತ್ನ ಪಟ್ಟು ಓದಿದರೆ ತಮ್ಮ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ. ಅಂಬೇಡ್ಕರ್, ವಿಶ್ವೇಶ್ವರಯ್ಯ, ವಿವೇಕಾನಂದರು, ಅಬ್ದುಲ್ ಕಲಾಂ ಅವರು ಓದಿನಿಂದ ಜ್ಞಾನ ಪಡೆದು ಇಂದಿಗೂ ನಮ್ಮೊಂದಿಗೆ ಜೀವಂತವಾಗಿರುವುದನ್ನು ನಾವು ನೋಡುತ್ತೇವೆ. ಹಾಗೆಯೇ ಪ್ರತಿಯೊಬ್ಬರು ಓದುವ ಮೂಲಕ ಜ್ಞಾನ ಗಳಿಸಿಕೊಂಡು ಸಮಾಜದಲ್ಲಿ ಗೌರವಯುತವಾಗಿ ಬಾಳಬೇಕು ಎಂದು ಹೇಳಿದರು.

ಜಗತ್ತು ಪ್ರತಿದಿನ ಬದಲಾಗುತ್ತಾ ಹೋಗುತ್ತದೆ. ಬದಲಾಗುವ ಜಗತ್ತಿನಲ್ಲಿ ನಾವು ಕೂಡ ಬದಲಾಗಬೇಕು. ತಾಂತ್ರಿಕವಾಗಿ ಕೌಶಲ್ಯಭರಿತರಾಗಿ ವಿದ್ಯಾರ್ಥಿಗಳು ಪದವಿಯೊಂದಿಗೆ ಬದಲಾದಾಗ ಉದ್ಯೋಗ ಮಾರುಕಟ್ಟೆಯಲ್ಲಿ ಆಕರ್ಷಿತರಾಗಿ ಉತ್ತಮ ಉದ್ಯೋಗ ದೊರಕುತ್ತದೆ. ಇದರಿಂದ ಉತ್ತಮರಾಗಿ ಬಾಳಲು ಸಾಧ್ಯ ಹೇಳಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ದೇವೇಂದ್ರಪ್ಪ ಹಾಗೂ ಪೂರ್ಣಿಮಾ ಹಾಗೂ ಇತರರು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಪ್ರಾಂಶುಪಾಲ ಮುರುಗೇಶ್ ವಹಿಸಿದ್ದರು.

# ಪಿಜಿಸಿಎಲ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ರೂ. 6.83 ಕೋಟಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಲಕರಣೆ ಪೂರೈಕೆ ಒಡಂಬಡಿಕೆಗೆ ಸಹಿ

ದಾವಣಗೆರೆ, ಸೆ.24- ಪಿಜಿಸಿಎಲ್ ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಜಿಲ್ಲೆಯ 10 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿವಿಧ ತರಹದ 102 ಪರಿಕರಗಳನ್ನು ಖರೀದಿಸಲು ರೂ.6.83 ಕೋಟಿಗಳಿಗೆ ಜಂಟಿ ಒಡಂಬಡಿಕೆಗೆ ಸಹಿ ಹಾಕಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ತಿಳಿಸಿದರು.

ಅವರು ಶುಕ್ರವಾರ ಪಿಜಿಸಿಎಲ್ ಪವರ್‌ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಸಿ.ಎಸ್.ಆರ್. ನಿಧಿಯ ನಿರ್ದೇಶಕ ಕೆ.ಎನ್.ಓಂಕಾರಪ್ಪ, ಪವರ್‌ಗ್ರಿಡ್ ಜನರಲ್ ಮ್ಯಾನೇಜರ್ ಹರೀಶ್ ನಾಯರ್‌ರೊಂದಿಗೆ ಜಂಟಿ ಒಡಂಬಡಿಕೆಗೆ ಸಹಿ ಹಾಕಿದ ನಂತರ ಮಾತನಾಡಿದರು.

ದಾವಣಗೆರೆ ತಾಲ್ಲೂಕಿನ ಹಾಲುವರ್ತಿ, ಆನಗೋಡು, ಅಣಜಿ, ಐಗೂರು, ಕೊಡಗನೂರು, ಮಾಯಕೊಂಡ, ರಾಮಗೊಂಡನಹಳ್ಳಿ, ಚನ್ನಗಿರಿ ತಾಲ್ಲೂಕು ತ್ಯಾವಣಿಗಿ, ಬಸವಾಪಟ್ಟಣ, ದಾಗಿನಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರ್ಜಿಕಲ್ ಪರಿಕರಗಳೂ ಸೇರಿದಂತೆ, ಆಕ್ಸಿಜನ್ ಸಿಲಿಂಡರ್, ಫೋಟೋ ಥೆರಪಿ, ಅಲ್ಟ್ರಾಸೌಂಡ್ ಸೇರಿದಂತೆ ಚಿಕಿತ್ಸೆಗೆ ಅಗತ್ಯವಿರುವ 102 ವಿವಿಧ ಬಗೆಯ ಪರಿಕರಗಳನ್ನು ಒದಗಿಸಲಾಗುತ್ತದೆ ಎಂದರು.




ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಪೌಷ್ಟಿಕತೆ, ಆರೋಗ್ಯ, ಶುದ್ಧ ಕುಡಿಯುವ ನೀರು ಪೂರೈಕೆ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಆದ್ಯತೆ ನೀಡುವ ಮೂಲಕ ಯಾರೂ ಸಹ ಚಿಕಿತ್ಸೆ ಲಭಿಸಲಿಲ್ಲ ಎಂಬ ಕಾರಣಕ್ಕೆ ಮರಣ ಹೊಂದಬಾರದೆಂಬ ಗುರಿಯೊಂದಿಗೆ ಸಿಎಸ್‌ಆರ್ ನಿಧಿಯನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತದೆ.

ಈಗಾಗಲೇ ಜಿಲ್ಲಾ ಆಸ್ಪತ್ರೆಗೆ ಬೇಕಾದ ಎಲ್ಲಾ ಸಲಕರಣೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದ್ದು ಇಲ್ಲಿ ಚಿಕಿತ್ಸೆಗೆ ಬಂದವರಿಗೆ ಯಾವುದೇ ಹಾನಿಯಾಗದಂತೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲು ಜಿಲ್ಲಾ ಸರ್ಜನ್‌ಗೆ ಸೂಚನೆ ನೀಡಲಾಗಿದೆ ಎಂದರು.

ಪವರ್‌ಗ್ರಿಡ್ ಸಿಎಸ್‌ಆರ್ ನಿರ್ದೇಶಕ ಕೆ.ಎನ್.ಓಂಕಾರಪ್ಪ ಮಾತನಾಡಿ, ಈ ಹಿಂದೆ ರಸ್ತೆ ಅಭಿವೃದ್ದಿಗೆ ರೂ.2.85 ಕೋಟಿ ನೀಡಲಾಗಿದ್ದು, ಒಟ್ಟು ಜಿಲ್ಲೆಗೆ ಈಗಾಗಲೇ 10.5 ಕೋಟಿ ಅನುದಾನ ಪವರ್‌ಗ್ರಿಡ್‌ನಿಂದ ಬಂದಿರುತ್ತದೆ. ಇನ್ನೂ ಜಿಲ್ಲೆಗೆ 20 ರಿಂದ 30 ಕೋಟಿ ಅನುದಾನ ಬರಬೇಕಾಗಿದ್ದು, ಯೋಜನೆಯನ್ನು ಸಲ್ಲಿಸಲಾಗಿದೆ. ಚಿಗಟೇರಿ ಆಸ್ಪತ್ರೆ ಇನ್ನೂ ಅಭಿವೃದ್ಧಿ ಆಗಬೇಕಾಗಿದ್ದು ಈ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತಿದೆ. ದಾವಣಗೆರೆ, ಚಿತ್ರದುರ್ಗ, ಹಾವೇರಿ, ಕಲಬುರಗಿ ಜಿಲ್ಲೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು ಒಟ್ಟು ರಾಜ್ಯಕ್ಕೆ 100 ಕೋಟಿ ಅನುದಾನ ತರಬೇಕೆಂಬ ಗುರಿ ಹೊಂದಲಾಗಿದೆ ಎಂದರು.

ಪವರ್‌ಗ್ರಿಡ್ ಜನರಲ್ ಮ್ಯಾನೇಜರ್ ಹರೀಶ್ ನಾಯರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಷಣ್ಮುಖಪ್ಪ, ಜಿಲ್ಲಾ ಸರ್ಜನ್ ಡಾ. ನಾಗೇಂದ್ರಪ್ಪ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹಾಂತೇಶ್ ಉಪಸ್ಥಿತರಿದ್ದರು.

# ಸಮಾಜ ಕಟ್ಟುವವರ ಸಂಖ್ಯೆ ಹೆಚ್ಚಾಗಲಿ



(1ನೇ ಪುಟದಿಂದ) ಸಂಪನ್ಮೂಲಗಳ ಕ್ರೋಢೀಕರಣದೊಂದಿಗೆ 2 ವರ್ಷಗಳ ಕಾಲಾವಕಾಶ ಬೇಕಿದೆ.

ವೇದಿಕೆಯಲ್ಲಿ ಕುಳಿತವರಾರು ಸ್ವಯಂ ಘೋಷಿತ ನಾಯಕರಲ್ಲ, ತಾಲ್ಲೂಕು ಜಿಲ್ಲೆಗಳಿಂದ ಆಯ್ಕೆಗೊಂಡಿರುವರು. ಹೊಸದನ್ನು ಹೇಳಲು ನಮಗೆ ಬರುವುದಿಲ್ಲ - ಹಳೆಯ ವಿಷಯಗಳನ್ನು ಕೇಳಲು ನೀವು ಸಿದ್ದರಿರುವುದಿಲ್ಲ ಎರಡು ವರ್ಷಗಳ ಅಧ್ಯಕ್ಷರಾಗಿದ್ದು, ಹೊಸ ಅಧ್ಯಕ್ಷರಿಗೆ ಅವಕಾಶ ಕಲ್ಪಿಸಲಿದ್ದೇವೆ.

ನಿಮ್ಮ ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಸಮಾಜದ ಕೆಲಸ ಮಾಡುವವರ ಆಯ್ಕೆಯ ಜವಬ್ದಾರಿ ನಿಮ್ಮದಾಗಿದೆ. ಸಮಾಜ ಸಂಘಟನೆ ಬಗ್ಗೆ ತಾಲ್ಲೂಕು ಪ್ರವಾಸಗಳ ದಿನಾಂಕ ನಿಗದಿಯೊಂದಿಗೆ ತೆರಳಲಿದ್ದು, ನಿಮ್ಮಗಳ ಸಲಹೆ, ಸಹಕಾರದ ಅವಶ್ಯಕತೆ ಹೆಚ್ಚಿದೆ ಎಂದರು.

ಹರಿಹರ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಮಾತನಾಡಿ ಪಂಚಮಸಾಲಿ ಸಂಘವು 2010-12 ರ ಕಾಲಘಟ್ಟದಲ್ಲಿದ್ದ ಉನ್ನತ ಸ್ಥಿತಿ ಮತ್ತೆ ಮರುಕಳಿಸಬೇಕಾದರೆ ಇಂತಹ ಸಭೆಗಳ ಮೂಲಕ ಚರ್ಚೆಗಳು ನಡೆಯಬೇಕಿದ್ದು, ಇದು ತಾಲ್ಲೂಕು ಹಾಗು ಜಿಲ್ಲಾಧ್ಯಕ್ಷರುಗಳ ಪರಿಶ್ರಮದಿಂದ ಸಾಧ್ಯವಾಗಲಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಲೋಕೇಶ್ ಮಾತನಾಡಿ, ಸಮಾಜದ ಸಂಘಟನಾತ್ಮಕ ದೃಷ್ಟಿಯಿಂದ ಪಂಚ ಯೋಜನೆಗಳ ಹಮ್ಮಿಕೊಂಡಿದ್ದು, ರಾಜ್ಯದ ಯಾವುದೇ ತಾಲ್ಲೂಕು ಸಮಾಜ ಪ್ರತ್ಯೇಕ ಕಚೇರಿಯನ್ನು ಹೊಂದಿ, ವರ್ಷದಲ್ಲಿ ಒಂದು ಸಾವಿರ ನೂತನ ಸದಸ್ಯರ ನೇಮಕರೊಂದಿಗೆ ಸಮಾಜದ ಜನಗಣತಿ ಹಾಗೂ ಸಂಪರ್ಕ ಸೇತುವಾಗಿ ಕಂಪ್ಯೂಟರ್ ಗಣಕೀಕರಣದಂತ 5 ಅಂಶಗಳನ್ನು ಸಾಧನೆಗೈದ ತಾಲ್ಲೂಕುಗಳಿಗೆ ರಾಜ್ಯ ಸಮಿತಿಯಿಂದ ಸ್ಫೂರ್ತಿದಾಯಕವಾಗಿ 50 ಸಾವಿರ ನೀಡುವುದಾಗಿ ತಿಳಿಸಿದರು.

ರಾಜ್ಯ ಸಂಘದ ಕೋಶಾಧ್ಯಾಕ್ಷ ಶಿವ ಗುಡ್ಡಾಪುರ 2022-2023ನೇ ಸಾಲಿನ ಲೆಕ್ಕ ಪತ್ರಗಳ ವಿವರಣೆ ನೀಡಿದರು.

ಸಮಾರಂಭದಲ್ಲಿ ಹೊನ್ನಾಳಿ ತಾ. ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ, ರಾಜ್ಯ ಗೌ. ಅಧ್ಯಕ್ಷ ಬಾವಿ ಬೆಟ್ಟಪ್ಪ, ಹೊನ್ನಾಳಿ ಡಾ. ರಾಜಕುಮಾರ, ಟ್ರಸ್ಟ್‌ನ ನಿರ್ದೇಶಕ ಜ್ಯೋತಿಪ್ರಕಾಶ್, ಹರಿಹರ ಬಾಬಣ್ಣ, ರಾಜ್ಯ ಉಪಾಧ್ಯಕ್ಷ ಪರಮೇಶ ಪಟ್ಟಣಶೆಟ್ಟಿ, ಆಶಾ ಕಲ್ಲಪ್ಪ, ರಾಜ್ಯಾಧ್ಯಕ್ಷ ಸೋಮನಗೌಡ ಪಾಟೀಲ್, ಸ. ಕಾರ್ಯದರ್ಶಿ ಮಲ್ಲಣ್ಣ ಬೊಮ್ಮಸಾಗರ , ಸಿದ್ದೇಶ ಬೇಗೂರು, ಶಂಕರ್ ಗೌಡ ಪಾಟೀಲ್, ಮಹಿಳಾ ಘಟಕದ ಅಧ್ಯಕ್ಷೆ ಮಂಗಳಾ ಬಸವರಾಜ್, ರಾಜ್ಯದ ಜಿಲ್ಲಾಧ್ಯಕ್ಷರುಗಳು, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರುಗಳು, ಮಹಿಳಾ ಘಟಕದ ಹಾಗೂ ಹೊನ್ನಾಳಿ ಘಟಕದ ಪದಾಧಿಕಾರಿಗಳು, ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಆರ್ಥಿಕತೆಯ ಎಲ್ಲೆಡೆ ಅವ್ಯವಸ್ಥೆ : ಕಾಂಗ್ರೆಸ್

(1ನೇ ಪುಟದಿಂದ) ದೇಶದ ಗಮನ ಬೇರೆಡೆ ಸೆಳೆಯಲು ಸರ್ಕಾರ ಪ್ರಯತ್ನ ನಡೆಸಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಮೋದಿ ಸರ್ಕಾರ ಈ ಮಾಹಿತಿಯನ್ನು ಎಷ್ಟೇ ಮುಚ್ಚಿಡುವ ಪ್ರಯತ್ನ ನಡೆಸಿದರೂ, ದೇಶದ ಬಹುತೇಕ ಜನರು ಸಂಕಷ್ಟದಿಂದ ಬಳಲುತ್ತಿದ್ದಾರೆ ಎಂಬುದು ವಾಸ್ತವ ಎಂದವರು ಹೇಳಿದ್ದಾರೆ.

ರಿಸರ್ವ್ ಬ್ಯಾಂಕ್ ಸೆಪ್ಟೆಂಬರ್‌ನಲ್ಲಿ ಪ್ರಕಟಿಸಿರುವ ಮಾಹಿತಿಯನ್ನು ಪರಿಗಣಿಸಿದಾಗ ಮೋದಿ ಸರ್ಕಾರ ಕೊರೊನಾದಿಂದ ಚೇತರಿಸಿಕೊಳ್ಳುವ ಹಾದಿಯಲ್ಲಿ ಎಡವಿರುವುದು ಸ್ಪಷ್ಟವಾಗುತ್ತದೆ ಎಂದವರು ಹೇಳಿದ್ದಾರೆ.

2020ರ ಫೆಬ್ರವರಿಯಲ್ಲಿ ಶೇ.43ರಷ್ಟು ಜನರು ಶ್ರಮಿಕರಾಗಿದ್ದರು. ಮೂರೂವರೆ ವರ್ಷಗಳ ನಂತರವೂ ಈ ದರ ಶೇ.40ರ ಹಂತದಲ್ಲೇ ಇದೆ. ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ವರದಿಯ ಪ್ರಕಾರ, 2021-22ರ ವೇಳೆ 25 ವರ್ಷ ಮೀರಿದ ಶೇ.42 ರಷ್ಟು ಪದವೀಧರರು ನಿರುದ್ಯೋಗಿಗಳಾಗಿದ್ದಾರೆ ಎಂದು ರಮೇಶ್ ಹೇಳಿದರು.

2022ರಲ್ಲಿ ಶೇ.85ರಷ್ಟು ಮಹಿಳೆಯರು ಮಾತ್ರ ಕೊರೊನಾಗಿಂತ ಮುಂಚಿನ ಅವಧಿಯ ಆದಾಯ ಪಡೆಯಲು ಸಾಧ್ಯವಾಗುತ್ತಿದೆ. ಕೊರೊನಾ ನಂತರ ಭಾರತ 45 ವರ್ಷಗಳಲ್ಲೇ ಅತಿ ಹೆಚ್ಚಿನ ನಿರುದ್ಯೋಗ ಎದುರಿಸುತ್ತಿತ್ತು. ಮೋದಿ ಸರ್ಕಾರ ಈ ಮಾಹಿತಿಯನ್ನು ಸಾರ್ವಜನಿಕರಿಂದ ಮುಚ್ಚಿಡುವ ಪ್ರಯತ್ನ ನಡೆಸಿದೆ ಎಂದವರು ಆರೋಪಿಸಿದರು.

ಅಗತ್ಯ ವಸ್ತುಗಳ ಬೆಲೆಗಳು ತೀವ್ರ ಏರಿಕೆ ಕಂಡಿವೆ. ಇದರಿಂದಾಗಿ ಜನಸಾಮಾನ್ಯರ ಕುಟುಂಬಗಳ ಆರ್ಥಿಕ ನಿರ್ವಹಣೆಯ ಮೇಲೆ ಪರಿಣಾಮವಾಗಿದೆ ಎಂದೂ ರಮೇಶ್ ಹೇಳಿದ್ದಾರೆ.

# ಭೂ ಸ್ವಾಧೀನದ ಕಾನೂನು ಬದಲಾಗಲಿ

(1ನೇ ಪುಟದಿಂದ) ಮಾಡಿದೆ. ಎಲ್ಲಾ ಸರ್ಕಾರಗಳು ರೈತರ ಬಗ್ಗೆ ಮಾತನಾಡುತ್ತವೆ ಆದರೆ ಕಾರ್ಯರೂಪಕ್ಕೆ ತರುವುದರಲ್ಲಿ ವಿಳಂಬವಾಗುವುದು ವಿಷಾದನೀಯ. ಇದುವರೆಗೂ ರೈತನ ಹಿನ್ನೆಲೆಯಿಂದ ಬಂದ ವ್ಯಕ್ತಿಗಳು ಕೃಷಿಮಂತ್ರಿ ಆಗದಿರುವುದು ಬೇಸರ. ಸರ್ಕಾರವು ರೈತರ ಸ್ಥಿತಿಗತಿಗಳನ್ನು ಸುಧಾರಣೆ ಮಾಡಬೇಕಿದೆ. ಎಲ್ಲಾ ರೈತರು ಒಗ್ಗಟ್ಟಾಗಿ ನಿಮ್ಮ ಸಮಸ್ಯೆಗಳನ್ನು ಕ್ರೂಢಿಕರಿಸಿ ಸರ್ಕಾರಕ್ಕೆ ವರದಿ ಕೊಡಿ ಎಂದರು.

ಅರಣ್ಯ ಜೀವಿ ಹಾಗೂ ಪರಿಸರ ಸಚಿವ ಈಶ್ವರ್ ಖಂಡ್ರೆ ಮಾತಾ ನಾಡಿ, ರೈತ ದೇಶದ ಅನ್ನದಾತ, ರೈತರು ಶೇ.70ರಷ್ಟು ಕೃಷಿ ಅವಲಂಬಿತರು. ಒಂದು ಕಾಲದಲ್ಲಿ ಬಲಾಢ್ಯನಾಗಿದ್ದ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ರೈತರ ಸಮಸ್ಯೆ ಪರಿಹಾರ ಆಗಿದೆಯಾ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದರು.

ವಿಮಾ ಯೋಜನೆ ರೈತರ ತುಟಿಗೆ ತುಪ್ಪ ಸವರುವ ಯೋಜನೆಯಾಗಿದೆ. ಎಲ್ಲಾ ರೈತರು ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹೊನ್ನಾಳಿ ಶಾಸಕರಾದ ಡಿ.ಜಿ. ಶಾಂತನಗೌಡ ಮಾತನಾಡಿ, ಸಹಪಂಕ್ತಿ ಭೋಜನ, ಸಮಾನತೆ ಮೂಲಕ ಸಮಾಜದ ಕ್ರಾಂತಿಗೆ ಕಾರಣರಾದವರು ಹಿರಿಯ ಶ್ರೀಗಳವರು. ರೈತರೇ ಶ್ರದ್ಧಾಂಜಲಿಗೆ ದಾಸೋಹ ಸಾಮಾಗ್ರಿಗಳನ್ನು ಸ್ವಯಂ ಪ್ರೇರಿತರಾಗಿ ನೀಡಿರುವುದು ಸ್ವಾಗಾತಾರ್ಹ ಎಂದರು.

ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ, ಕಲ್ಯಾಣ ಕಾರ್ಯಗಳನ್ನು ಮಾಡಿ ಸಮ-ಸಮಾಜವನ್ನು ಬೆಳೆಸಿದ ಆಧುನಿಕ ಬಸವಣ್ಣ, ನಡೆದಾಡುವ ದೇವರು ನಮ್ಮ ಲಿಂ.ಶ್ರೀಗಳವರು. ಡಾ.ಶ್ರೀಗಳವರು ಶ್ರೀಮಠದ ಕೀರ್ತಿಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸಿದ್ದಾರೆ ಎಂದರು.

ಸಚಿವ ಡಿ.ಸುಧಾಕರ್ ಮಾತನಾಡಿ, ಸಿರಿಗೆರೆ ಶ್ರೀಮಠ ಇಂದು ನಾಡಿನ ಶ್ರೇಷ್ಠ ಮಠಗಳಲ್ಲಿ ಒಂದಾಗಿದೆ ಎಂದರು. ಶಿಕಾರಿಪುರ ಶಾಸಕ ಬಿ.ವೈ.ವಿಜಯೇಂದ್ರ ಮಾತನಾಡಿ, ಕನ್ನಡ ನಾಡಿನಲ್ಲಿ ಅಧ್ಯಾತ್ಮಿಕ ಸಿರಿ ಸಂಪತ್ತನ್ನು ಉಣ ಬಡಿಸಿದ ಕೀರ್ತಿ ತರಳಬಾಳು ಮಠಕ್ಕೆ ಸಲ್ಲಲುತ್ತದೆ ಎಂದರು.

ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ ಹಾಗೂ ರಾಜ್ಯ ರೈತ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಮಾತನಾಡಿ, ದೇಶದ ನಿಜವಾದ ಮಾಲಿಕರೆಂದರೆ ರೈತರು. ರೈತ ಮತ್ತು ಯೋಧರಿಗೆ ನಾವು ಚಿರಋಣಿಗಳಾಗಬೇಕು ಎಂದರು.

ರೈತರಾದ ನಾವು ಇಂದು ಸುಮಾರು 160 ಬೆಳೆಗಳನ್ನು ಬೆಳಯುತ್ತಿದ್ದೇವೆ. ಇದಕ್ಕಾಗಿ ಅಂದಾಜು 40ಲಕ್ಷ ಕೋಟಿ ರೂಗಳನ್ನು ಖರ್ಚು ಮಾಡಲಾಗಿದೆ. ಯಾವ ಯೂನಿರ್ವಸಿಟಿಯೂ ರೈತರ ಖರ್ಚಿನ ಬಗ್ಗೆ ಅಧ್ಯಯನ ಮಾಡಿಲ್ಲ. ಸರ್ಕಾರದ ಎಲ್ಲಾ ಕ್ಷೇತ್ರಗಳ ನೌಕರರ ಸಂಬಳ ಇಲ್ಲಿವರೆಗೂ ಶೇ.200ಕ್ಕಿಂತ ಅಧಿಕವಾಗಿದೆ. ಆದರೆ ರೈತರ ಬೆಳೆಗೆ ಶೇ.20ರಷ್ಟು ಮಾತ್ರ ಬೆಲೆ ಸಿಕ್ಕಿದೆ.

ನಮಗೆ ಸರ್ಕಾರ ಶೇ. 100ರಷ್ಟು ನೀರು ಮತ್ತು ವಿದ್ಯುಚ್ಛಕ್ತಿ ಕೊಟ್ಟರೆ ಸಾಕು ಸರ್ಕಾರವನ್ನು ರೈತರು ಏನೂ ಕೇಳುವುದಿಲ್ಲ. ರೈತರಿಗಾಗಿ ಜಾರಿಯಾಗಿದ್ದ ಯಶಸ್ವಿನಿ ಯೋಜನೆಯಲ್ಲಿ ಖಾಸಗಿ ಆಸ್ಪತ್ರೆಗಳು ಹೆಚ್ಚು ಹಣ ಸುಲಿಗೆ ಮಾಡುತ್ತಿವೆ. ಆದ್ದರಿಂದ ರೈತರು ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಲಿಖಿತ ಅರ್ಜಿ ಕೊಡಿ. ಈ ಬಾರಿ ಬರಗಾಲ ಹೆಚ್ಚಾಗಿರುವುದರಿಂದ ಸರ್ಕಾರವು ಸಾಲದ ವಸೂಲಿಗೆ ರೈತರ ಮನೆ ಬಾಗಲಿಗೆ ಬಾರದಿರಲಿ. ಭೂಸ್ವಾಧೀನ ನಿಯಮದಲ್ಲಿ ತಿದ್ದುಪಡಿ ತರಬೇಕಾಗಿದೆ ಎಂದರು.

ಯುವ ಮುಖಂಡ ಜಿ.ಎಸ್. ಅನಿತ್ ಕುಮಾರ್, ಲಿಂ.ಶಿವಕುಮಾರ ಶ್ರೀಗಳು ವ್ಯಕ್ತಿಯಾಗಿರದೆ, ಒಂದು ಶಕ್ತಿಯಾಗಿದ್ದರು ಎಂದು ಬಣ್ಣಿಸಿದರು.

ಇನ್‌ಸೈಟ್ಸ್ ಸಂಸ್ಥೆಯ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್ ಮಾತನಾಡಿ ಸಿರಿಗೆರೆ, ಬೆಂಗಳೂರು ತರಳಬಾಳು ಕೇಂದ್ರದಲ್ಲಿ ಐಎಎಸ್ ಹಾಗೂ ಕೆಎಎಸ್ ತರಬೇತಿ ಕೇಂದ್ರಗಳು ಸ್ಥಾಪನೆಯಾಗಬೇಕು ಎಂದು ಹೇಳುತ್ತಾ, ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಸಹಕಾರ ನೀಡುವುದಾಗಿ ಹೇಳಿದರು.

ಹಿರೇಕೆರೂರು ಶಾಸಕ ಯು.ಬಿ. ಬಣಕಾರ್, ಚಿತ್ರದುರ್ಗದ ಕಾಂಗ್ರೆಸ್ ಅಧ್ಯಕ್ಷರಾದ ತಾಜ್‌ಪೀರ್, ತರಳಬಾಳು ವಿದ್ಯಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಬಿ.ರಂಗನಾಥ್, ಆಡಳಿತಾಧಿಕಾರಿ ಎಚ್.ವಿ.ವಾಮದೇವಪ್ಪ ಇತರರಿದ್ದರು. ಇದೇ ವೇಳೆ ಬಸವರಾಜ ಬೊಮ್ಮಾಯಿ ಅವರು 'ಕೋರ್ಟಿನ ಕಟಕಟೆಯಲ್ಲಿ ಜಂಗಮ' ಕೃತಿ ಲೋಕಾರ್ಪಣೆ ಮಾಡಿದರು.

ಶ್ರೀಮಠದ ಆವರಣದಲ್ಲಿ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಂದ ಶಿವಮಂತ್ರ ಲೇಖನ ಜರುಗಿತು. ಬೆಳಗ್ಗೆ 10ಕ್ಕೆ ಡಾ.ಶ್ರೀಗಳವರು ಬೆಳಗ್ಗೆ ಶ್ರೀಮಠದ ಐಕ್ಯಮಂಟಪದ ಆವಣದಲ್ಲಿರುವ ಕತೃಗದ್ದುಗೆ, ಹಿರಿಯ ಗುರುಗಳ ಕಂಚಿನ ಪುತ್ತಳಿಗೆ ಹಾಗೂ ಗುರುಶಾಂತೇಶ್ವರ ಸ್ವಾಮೀಜಿಯವರಿಗೆ ಪುಷ್ಪ ಅರ್ಪಿಸಿದರು. ನಂತರ ಕುಂಭಮೇಳದ ಮೂಲಕ ಕಾರ್ಯಕ್ರಮಕ್ಕೆ ಸಾಗಿದರು.

# ರೈತನ ಗಟ್ಟಿ ಮಾಡಿದರೆ ಕೃಷಿ ಗಟ್ಟಿ: ಬೊಮ್ಮಾಯಿ

(1ನೇ ಪುಟದಿಂದ) ಎಂದು ಹೇಳಿದರು.

ಡಾ.ಶಿವಮೂರ್ತಿ ಶಿವಾಚಾರ್ಯ ಶ್ರೀಗಳಲ್ಲಿ ನಿಖರತೆ ಇರುತ್ತದೆ. ಆದ್ದರಿಂದಲೇ ಅವರ ಜ್ಞಾನ, ವಿಚಾರಕ್ಕೆ ಸರ್ಕಾರ ಸೇರಿದಂತೆ ಎಲ್ಲರೂ ತಲೆ ಬಾಗುತ್ತಾರೆ. ದೇಶಕ್ಕೆ ಬಹುದೊಡ್ಡ ಚರಿತ್ರೆ ಇದೆ. ಆದರೆ ಬೇಕಾಗಿರುವುದು ಚಾರಿತ್ರ್ಯ. ಚಾರಿತ್ರ್ಯ ಹೊಂದಿದ ಸಮಾಜ ನಿರ್ಮಾಣವಾಗಬೇಕಿದೆ. ಆಗ ಪೊಲೀಸರು, ಕಾನೂನು ನ್ಯಾಯಾಲಯ ಬೇಕಿಲ್ಲ ಎಂದು ಹೇಳಿದರು.

ಸನಾತನ ಧರ್ಮದ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡುತ್ತಾರೆ. ಆದರೆ ಮನುಷ್ಯ ಧರ್ಮದ ಬಗ್ಗೆ ಮೊದಲು ಚಿಂತಿಸಬೇಕಿದೆ. ನಾವು ಮನುಷ್ಯರಾಗಿ ಹುಟ್ಟಿದ್ದೇವೆ. ಪ್ರಾಣಿಗಳಾಗಿ ಹುಟ್ಟಿಲ್ಲ. ನಮ್ಮ ಮಾತುಗಳಿಂದ ಇನ್ನೊಬ್ಬರಿಗೆ ನೋವಾಗುವ ಮಾತುಗಳನ್ನಾಡಬಾರದು ಎಂದು ಬೊಮ್ಮಾಯಿ ಹೇಳಿದರು.

ಗುರುಗಳನ್ನೂ ಗುರಿಯಾಗಿಸುವ ಸಂದರ್ಭದಲ್ಲಿ ಶ್ರೀ ಮಠವು ನ್ಯಾಯಪೀಠದ ಮೂಲಕ ನಿಷ್ಠುರತೆಯಿಂದ ನ್ಯಾಯ ಒದಿಗಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

# 2034ರವರೆಗೆ ಮಹಿಳೆಯರಿಗೆ ಮೀಸಲಾತಿ ಸಿಗದು : ಸಿಬಾಲ್

(1ನೇ ಪುಟದಿಂದ) ಗಣತಿ ಬೇಡಿಕೆ ಮುಂದಿಡುತ್ತಿದ್ದಾರೆ. ಬಿಜೆಪಿ ಈ ಬೇಡಿಕೆಯನ್ನು ಕಡೆಗಣಿಸಲಾಗದು. ಹೀಗಾಗಿ ಜನಗಣತಿ ಇನ್ನಷ್ಟು ವಿಳಂಬವಾಗಲಿದೆ ಎಂದವರು ಹೇಳಿದ್ದಾರೆ. ಕ್ಷೇತ್ರ ಪುನರ್ವಿಂಗಡಣೆ ಸುದೀರ್ಘ ಹಾಗೂ ಬೃಹತ್ ಪ್ರಕ್ರಿಯೆಯಾಗಿದೆ. ಹೀಗಾಗಿ 2034ರ ಮುಂಚೆ ಮಹಿಳಾ ಮೀಸಲಾತಿ ಜಾರಿಗೆ ತರಲು ಸಾಧ್ಯವಾಗುವುದಿಲ್ಲ ಎಂದವರು ಅಭಿಪ್ರಾಯ ಪಟ್ಟಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೇ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ತಂದಿರುವುದು ಸ್ಪಷ್ಟವಾಗಿದೆ. ಇಲ್ಲದೇ ಹೋಗಿದ್ದರೆ ವಿಶೇಷ ಅಧಿವೇಶನ ಕರೆಯುವ ಅಗತ್ಯವಿರಲಿಲ್ಲ ಎಂದವರು ತಿಳಿಸಿದರು.

# ಕಡ್ಲೇಬಾಳ್‌ನಲ್ಲಿಂದು ಜನತಾ ದರ್ಶನ

ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದಲ್ಲಿ ಇಂದು ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಜಿಲ್ಲಾ ಮಟ್ಟದಲ್ಲಿ ಪ್ರತಿ ತಿಂಗಳು ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕ ಕುಂದು ಕೊರತೆಗಳನ್ನು ನಿರ್ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ತಿಳಿಸದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ. ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ಸ್ವೀಕರಿಸಿ, ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಲಾಗುತ್ತಿದೆ.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ಸಾರ್ವಜನಿಕ ಕುಂದುಕೊರತೆಯ ವಿವರಣೆ ವ್ಯವಸ್ಥೆಯನ್ನು ದಾಖಲಿಸಲು ಇಲಾಖಾವಾರು ಪ್ರತ್ಯೇಕ ಕೌಂಟರ್‌ಗಳನ್ನು ತೆರೆಯಲಾಗುತ್ತದೆ.

**ತಕ್ಷಣ ಬೇಕಾಗಿದ್ದಾರೆ**
ಮನೆ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
ವಯಸ್ಸು : 25 ರಿಂದ 30 ವರ್ಷ
ಸಮಯ : ಬೆಳಿಗ್ಗೆ 8.30ರಿಂದ ಸಂಜೆ 5.30ರವರೆಗೆ.
97385 23711

**ಸೈಟುಗಳು ಮಾರಾಟಕ್ಕಿವೆ**
ಕುಂದುವಾಡ ರಸ್ತೆ, ಶಿವಗಂಗಾ ಚೌಟ್ರಿ ಹಿಂಭಾಗ 40 ಅಡಿ ರಸ್ತೆಗೆ 40x60, 40x60 ಪೂರ್ವಕ್ಕೆ, 60x83 ದಕ್ಷಿಣ ಅಮರ್‌ನಾಥ್ ಲೇಔಟ್‌ನಲ್ಲಿ 28X50 ಪೂರ್ವಕ್ಕೆ ಗ್ಲಾಸ್ ಹೌಸ್ ಎನ್.ಎಂ.ಕೆ. ಲೇಔಟ್‌ನ ಪಕ್ಕದಲ್ಲಿ 30x40 ಪಶ್ಚಿಮ.
ಬಸವರಾಜ್.ಎನ್.
98440 84229

**ಸೈಟ್ ಮಾರಾಟಕ್ಕೆ (KHB)**
(for immediately register only)
ಕರ್ನಾಟಕ ಹೌಸಿಂಗ್ ಬೋರ್ಡ್, ತುಂಗಭದ್ರಾ ಬಡಾವಣೆಯಲ್ಲಿ 20x30 ಉತ್ತರ (13 ಲಕ್ಷ), 30x40 ದಕ್ಷಿಣ (33 ಲಕ್ಷ), 40x60 ದಕ್ಷಿಣ (64 ಲಕ್ಷ)
ಕಿರಣ್ ಭೂಸನೂರ್ (ಏಜೆಂಟ್)
98440-63409
(ಲೊಕೇಶನ್ ತುಂಬಾ ಚನ್ನಾಗಿ ಇದೆ)

**ಸೈಟ್ ಖರೀದಿಗೆ ಬೇಕಾಗಿದೆ**
ಫೈನಲ್ ಅಪ್ರೂವಲ್ ಆಗಿರುವ ದಾವಣಗೆರೆ ಸುತ್ತ ಮುತ್ತ ಲೇಔಟ್‌ಗಳಲ್ಲಿ. (ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ಮಾತ್ರ)
ಕಿರಣ್ ಭೂಸನೂರ್
98440-63409

**ಬಾಡಿಗೆಗಿದೆ**
ಏಜೆನ್ಸಿ/ಗೋಡೌನ್‌ಗೆ ಸೂಕ್ತವಾದ 25X50 ಜಿಂಕ್ ಶೀಟ್ ಕಟ್ಟಡ, ವಿದ್ಯಾರ್ಥಿ ಭವನ, ಹತ್ತಿರ ಬಾಡಿಗೆಗೆ ಇದೆ
91418 75151

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.
ವಿಳಾಸ : ಡಾ. ಎನ್. ಹೆಚ್. ಕೃಷ್ಣ, ಜೈನ್ ಲ್ಯಾಬ್ ಕೆಳಗೆ, ಮೋತಿ ವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ.

**ಜಮೀನು ಮಾರಾಟಕ್ಕಿದೆ**
ಶಾಮನೂರಿನಿಂದ ಮಲೇಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ಬೂದಿಹಾಳ್ ಹತ್ತಿರ 3 ಎಕರೆ 23 ಗುಂಟೆ ಬೋರ್‌ವೆಲ್ ನೀರಿನ ಸೌಕರ್ಯವಿರುವ ನೀರಾವರಿ ಜಮೀನು ಮಾರಾಟಕ್ಕಿದೆ.
99454 61501, 76196 37007

**ಬೇಕಾಗಿದ್ದಾರೆ**
ಹರಿಹರ ಡೈಪರ್ ಸೆಂಟರ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ
ಸೇಲ್ಸ್ ಗರ್ಲ್, ಹರಿಹರ.
ಫೋ. : 7975077328

**WANTED**
Office Work - 1,
Sales - 1
Technician Service - 1
THE MOBILE SHOP
ASHOKA & AVK ROAD, DVG.
90608 83886

**APARTMENT FOR SALE (ONLY VEG)**
2 BHK furnished ಹೊಸ ಮನೆ ಸೇಲ್‌ಗೆ. MCC "B" BLOCK ಡೆಂಟಲ್, ಮೆಡಿಕಲ್ ಹತ್ತಿರ ಇದೆ.
ಕಿರಣ್ ಭೂಸನೂರ್
98440-63409

**ನುರಿತ ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ**
ರಾಜು ಪ್ರಿಂಟರ್ಸ್
ಶಿವಪ್ಪಯ್ಯ ರಸ್ತೆ, ದಾವಣಗೆರೆ.
99640 28818

**ಲಾರಿ ಡ್ರೈವರ್ ಬೇಕಾಗಿದ್ದಾರೆ**
ಲಾರಿ ಡ್ರೈವರ್ ಬ್ಯಾಡ್ಜ್ ಉಳ್ಳವರು ಮತ್ತು ಮಹಿಳೆಯರು SOG ಕಾಲೋನಿ KSSIDC ಕೈಗಾರಿಕೆಯಲ್ಲಿ ಕೆಲಸವಿದೆ, 10 ಮಂದಿ ಮಹಿಳೆಯರಿಗೆ 18 ವರ್ಷ ಮೇಲ್ಪಟ್ಟವರಿಗೆ ಕೆಲಸವಿದೆ. ಬೆಳಿಗ್ಗೆ 10 ಗಂಟೆ ನಂತರ ಫೋನ್ ಮಾಡಿ.
99865 38099

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ವಾಹನಗಳಿಗೆ ಪೆಟ್ರೋಲ್ ಹಾಕಲು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ :
70266-43088

**WANTED FEMALE RECEPTIONIST**
Age : 20 to 27years,Quli : PUC/Any degree
Kannada, English, Hindi
12k to 15k Per Month
HAIRPOINT UNISEX SALON
MCC B block, near water tank park, Davangere
97386 64400, 91483 19342

**ಮನೆ ಮಾರಾಟಕ್ಕಿದೆ**
ಸಿದ್ದವೀರಪ್ಪ ಬಡಾವಣೆಯಲ್ಲಿ ಅಳತೆ 40x55 ಇರುವ ಮನೆ ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ :
78924 05221

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ, ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್ ಮೇಕಪ್, ಕಲಿಕೆಗೆ ಪ್ರಾಡಕ್ಟ್ಸ್‌ಗಳನ್ನು ಕೊಡಲಾಗುತ್ತದೆ, ಎರಡು Portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು. ಸಂಪರ್ಕಿಸಿ:
Glamorous Studio
Girija make up artist
94817 76305

**ಕೆಲಸಕ್ಕೆ ಬೇಕಾಗಿದ್ದಾರೆ**
ಕಾರ್ ವಾಷ್‌ನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಿಚಾರಿಸಿ :
80730 70936

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ
ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
91085 12030, 99648 02033

**ನೇರ ಪರೀಕ್ಷೆಗಳು**
SSLC, PUC (ARTS/COMM/SCI)
NTC- ನರ್ಸರಿ ಟೀಚರ್ಸ್ ಟ್ರೈನಿಂಗ್,
ಶ್ರೀ ಗಂಗೋತ್ರಿ ಕಮ್ಯುನಿಟಿ ಕಾಲೇಜ್, ಗಾಂಧಿ ಸರ್ಕಲ್, ಮೋತಿ ಸ್ವೀಟ್ಸ್ ಪಕ್ಕ ದಾವಣಗೆರೆ. ಸಂಪರ್ಕಿಸಿ :
86602 35013

**ನೇತ್ರ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**WANTED**
ಎಪಿಎಂಸಿ ಯಾರ್ಡ್‌ನಲ್ಲಿರುವ ಪ್ರತಿಷ್ಠಿತ ಪ್ಲೈವುಡ್ ಗೋದಾಮಿಗೆ ತ್ರಿಚಕ್ರ ವಾಹನ ಚಾಲಕ / ಸಹಾಯಕರು ಬೇಕಾಗಿದ್ದಾರೆ.
ಸಂಪರ್ಕಿಸಿ :
94495 85680

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಕೃಪ ಹೋಮ್ ಇಂಡಸ್ಟ್ರೀಸ್**
ನಮ್ಮಲ್ಲಿ ಉತ್ತಮ ಗುಣಮಟ್ಟದ ರೊಟ್ಟಿ ಮತ್ತು ಚಪಾತಿಗಳು ದೊರೆಯುತ್ತವೆ. ಹೋಟೆಲ್ ಮತ್ತು ಖಾನಾವಳಿಗಳಿಗೆ ಹೋಲ್‌ಸೇಲ್‌ದರದಲ್ಲಿ ಪ್ರತಿದಿನ ಮಾಡಿಕೊಡಲಾಗುವುದು. 50 ಮೇಲ್ಪಟ್ಟ ಖರೀದಿಗೆ ಹೋಮ್ ಡೆಲಿವರಿ ಕೊಡಲಾಗುವುದು.
77950 48997, 99862 42688

**ಸೈಟುಗಳು ಮಾರಾಟಕ್ಕಿವೆ**
35x47 ದಕ್ಷಿಣ ಆಂಜನೇಯ ಬಡಾವಣೆಯಲ್ಲಿ, 40x60 ದಕ್ಷಿಣ ಆಂಜನೇಯ ಬಡಾವಣೆಯಲ್ಲಿ, 30x50 ಡಾಲರ್ಸ್ ಕಾಲೋನಿ ಉತ್ತರ 30x50 ಮಹಾಲಕ್ಷ್ಮಿ ಬಡಾವಣೆ ಪಶ್ಚಿಮ.
ಏಜೆಂಟರು ಎಸ್.ಯಲ್ಲೋಜಿರಾವ್
97418 11694

**SHIPRATH Courier &Cargo**
Multi courier service. Door step courier booking and Delivery.
To Book Login :
www.shiprath.com or
Call - 99860 04772

**ಸೈಟುಗಳು ಮಾರಾಟಕ್ಕಿವೆ**
30x62, ಎಸ್.ಎಸ್. ಬಿ ಬ್ಲಾಕ್ ಪೂರ್ವ, 44x60 ಎಂಸಿಸಿ ಎ ಬ್ಲಾಕ್ ಪೂರ್ವ, 30x45 ಸಿದ್ದವೀರಪ್ಪ ಬಡಾವಣೆ, 40x80 ಪೂರ್ವ ರಂಗನಾಥಸ್ವಾಮಿ ಬಡಾವಣೆ.
ಏಜೆಂಟರು ಎಸ್. ಯಲ್ಲೋಜಿರಾವ್
97418 11694

**ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ**
ಎಲ್ಲಾ ರೀತಿಯ ದೈಹಿಕ ರೋಗಗಳು, ಮಾನಸಿಕ ಕಾಯಿಲೆಗಳು ಮತ್ತು ವ್ಯಾಪಾರ, ವ್ಯವಹಾರ, ವೈವಾಹಿಕ, ಶತ್ರುಬಾಧೆ, ಮನೆಯಲ್ಲಿ ಕಿರಿಕಿರಿ ಈ ಎಲ್ಲಾ ಸಮಸ್ಯೆಗಳಿಗೆ ರಾಮ ಬಾಣ.
80733 42011

**ಬೇಕಾಗಿದ್ದಾರೆ**
PUC/DEGREE
ಆದ ಮಹಿಳೆಯರು ರ್‍ಯಾಂಕ್ ನಿಂದ ಸ್ಟಾಕ್ ತೆಗೆಯಲು ಮಹಿಳೆಯರು ಹಾಗೂ ಡೆಲಿವರಿ ಬಾಯ್ಸ್ ಸಗಟು ಔಷಧಿ ಅಂಗಡಿಗೆ ಬೇಕಾಗಿದ್ದಾರೆ. ಭೇಟಿ ಮಾಡುವ ಸಮಯ ಸಂಜೆ:6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**Tally Operator ಬೇಕಾಗಿದ್ದಾರೆ**
ನುರಿತ ಹಾಗೂ ಅನುಭವವುಳ್ಳ ಅಭ್ಯರ್ಥಿ Prime Tally Operator ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ : Mangala Traders
M : 7259635931

**WANTED**
We are Hiring telecallers Good Communication Skill.
Required : (Only for Girls, Womens)
Salary : 6000, 7000 (Under Graduates)
Salary : 8000, 9000, 10000 (Post Graduates)
Contact : 95350 51589, 78670 75786
Office Location : Hasabhavi Cicrle, K.R.Market, Davanagere

**KASHMIR TOURS**
Dep : 11th OCT 6 Days
DUBAI 4th NOV 5 Days
All inclusive Group Tours
DVG WORLD TOURS
99006 66122

**TUTION**
IGCSE, ICSE, CBSE and State Board from Class 1 to 12, MCC `A' Block
98444 92888

**ಗ್ಯಾಸ್‌ಗೀಸರ್ ರಿಪೇರಿ**
ಎಲ್ಲಾ ಕಂಪನಿಯ ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ನಿಮ್ಮ ಮನೆಗೆ ಬಂದು ರಿಪೇರಿ ಮಾಡಿಕೊಡುತ್ತೇವೆ. ಹಳೆಯ ಗ್ಯಾಸ್ ಗೀಸರ್ ಮತ್ತು ಗ್ಯಾಸ್ ಸ್ಟವ್‌ಗಳನ್ನು ಖರೀದಿಸುತ್ತೇವೆ.
ರತ್ನ ಮಾರ್ಕೆಟಿಂಗ್
99019 40727

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಶ್ರೀ ಶಾರದಾಂಬ ದೇವಸ್ಥಾನಕ್ಕೆ ಹಾರನಹಳ್ಳಿ ಅಶೋಕ್ ಭೇಟಿ



ದಾವಣಗೆರೆ, ಸೆ.24- ಕರ್ನಾಟಕ ರಾಜ್ಯ ಹೈಕೋರ್ಟಿನ ವಕೀಲರು, ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಹಾರನಹಳ್ಳಿ ಅಶೋಕ್ ಅವರು ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನಕ್ಕೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಅವರನ್ನು ಶ್ರೀ ಶಂಕರ ಸೇವಾ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಶಂಕರ ಸೇವಾ ಸಂಘದ ಅಧ್ಯಕ್ಷ ಡಾ. ಬಿ.ಟಿ ಅಚ್ಯುತ, ಕಾರ್ಯದರ್ಶಿ ಶ್ರೀನಿವಾಸ್ ಜೋಶಿ, ಡಾ. ಶಶಿಕಾಂತ್, ವಿನಾಯಕ ಜೋಶಿ, ನಿರಂಜನ್, ಟಿ.ವಿ. ಸುಬ್ರಹ್ಮಣ್ಯ, ಬಾಲಕೃಷ್ಣ ವೈದ್ಯ, ರಮೇಶ್ ಪಾಟೀಲ್, ಗಿರೀಶ್ ನಾಡಿಗ್ ಹಾಗೂ ಬ್ರಾಹ್ಮಣ ಸಮಾಜದ ಸದಸ್ಯರುಗಳು ಹಾಜರಿದ್ದರು.

## ನಗರದಲ್ಲಿ ಇಂದು ಕರ್ನಾಟಕ ರಕ್ಷಣಾ ವೇದಿಕೆಯಿಂದ ಉರುಳು ಸೇವೆ

ಭದ್ರಾ ಜಲಾಶಯದಿಂದ ನಾಲೆಗಳಿಗೆ ನೀರು ಬಿಡುವಂತೆ ಇಂದು ಮಧ್ಯಾಹ್ನ 12 ಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಉರುಳು ಸೇವೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ತಿಳಿಸಿದ್ದಾರೆ.

# ಗ್ರಾಹಕರ ಸೇವೆಯ ಮುಂಚೂಣಿಯಲ್ಲಿ ಕರಾವಳಿ ಸಹಕಾರಿ ಸಂಘ

## ಸಂಘದ 23ನೇ ವರ್ಷದ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷ ಸಿಎ ಉಮೇಶ್ ಶೆಟ್ಟಿ ಸಂತಸ

ದಾವಣಗೆರೆ, ಸೆ. 24- ಪ್ರಗತಿಯನ್ನು ಕಾಯ್ದುಕೊಂಡು ಮುನ್ನಡೆದಿರುವ ಸ್ಥಳೀಯ ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ಸಂಘವು ನಗರದ ಮುಂಚೂಣಿಯಲ್ಲಿರುವ ಸಹಕಾರಿ ಸಂಸ್ಥೆಗಳಲ್ಲೊಂದಾಗಿದೆ ಎಂದು ಹಿರಿಯ ಲೆಕ್ಕ ಪರಿಶೋಧಕರೂ ಆಗಿರುವ ಸಂಘದ ಅಧ್ಯಕ್ಷ ಸಿಎ ಉಮೇಶ್ ಶೆಟ್ಟಿ ಸಂತಸ ವ್ಯಕ್ತಪಡಿಸಿದರು.

ಇಲ್ಲಿನ ಡಾ. ಶಾಮಸುಂದರ ಶೆಟ್ಟಿ ಬಂಟರ ಭವನದಲ್ಲಿ ಮೊನ್ನೆ ಏರ್ಪಾಡಾಗಿದ್ದ ಕರಾವಳಿ ಸೌಹಾರ್ದ ಪತ್ತಿನ ಸಹಕಾರ ಸಂಘದ 23ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2023 ಮಾರ್ಚ್ ಅಂತ್ಯಕ್ಕೆ 3126 ಜನ ಸದಸ್ಯರುಗಳ ಈ ಸಂಘವು 54 ಲಕ್ಷ ರೂ. ಷೇರು ಬಂಡವಾಳದೊಂದಿಗೆ 7.27 ಕೋಟಿ ರೂ. ಗಳಷ್ಟು ಸ್ವಂತ ನಿಧಿಯನ್ನು ಹೊಂದಿದೆ. 23 ಕೋಟಿ ರೂ. ಠೇವಣಿ ಸಂಗ್ರಹಿಸಲಾಗಿದ್ದು, ಸದಸ್ಯರುಗಳಿಗೆ ಅವರ ಅಗತ್ಯಗನುಗುಣವಾಗಿ 18.04 ಕೋಟಿ ರೂ. ಸಾಲ-ಸೌಲಭ್ಯ ಒದಗಿಸಲಾಗಿದೆ.

69 ಲಕ್ಷ ರೂ. ನಿವ್ವಳ ಲಾಭ ಗಳಿಸಿದ್ದು, ಷೇರುದಾರರಿಗೆ ಶೇ. 14ರಂತೆ ಲಾಭಾಂಶ ನೀಡಲು ಸಂಘದ ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿದೆ ಎಂದು ಸಂಘದ ಪ್ರಗತಿಯನ್ನು ಅಂಕಿ-ಅಂಶಗಳೊಂದಿಗೆ ಉಮೇಶ್ ಶೆಟ್ಟಿ ಅವರು ಸಭೆಗೆ ವಿವರಿಸಿದರು.



ನಗರದಲ್ಲಿರುವ ಸಾಕಷ್ಟು ಬ್ಯಾಂಕ್‌ಗಳು ಸಹಕಾರಿ ಸಂಘಗಳ ಪೈಪೋಟಿಯ ನಡುವೆಯೂ ಕರಾವಳಿ ಸೌಹಾರ್ದ ಪತ್ತಿನ ಸಹಕಾರ ಸಂಘವು ಲಾಭದಾಯಕದಲ್ಲಿ ಸಾಗುತ್ತಾ ಸ್ವಂತ ಕಟ್ಟಡ ಹೊಂದಿದ್ದು, ಸದಸ್ಯರ, ಗ್ರಾಹಕರ, ಠೇವಣಿದಾರರ ಮತ್ತು ಸಾರ್ವಜನಿಕರ ವಿಶ್ವಾಸ ಗಳಿಸಿಕೊಂಡು ತನ್ನದೇ ಆದ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿದೆ ಎಂದು ಅವರು ಆಶಿಸಿದರು.

ಇದೇ ಸಂದರ್ಭದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಂಘದ ಸದಸ್ಯರಾದ ಪ್ರತಿಭಾನ್ವಿತರಾದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಅಲ್ಲದೇ ಹಿರಿಯ ಪತ್ರಕರ್ತ ಸೀತಾರಾಮಶೆಟ್ಟಿ ಮತ್ತು ನಾಲ್ವರು ಪತ್ರಿಕಾ ವಿತರಕರನ್ನು ಶಾಲು ಹೊದಿಸಿ, ಸನ್ಮಾನಿಸುವುದರ ಮೂಲಕ ಗೌರವಿಸಲಾಯಿತು.

ಸಂಘದ ಉಪಾಧ್ಯಕ್ಷ ಮಹೇಶ್ ಆರ್. ಶೆಟ್ಟಿ ಮಾತನಾಡಿ, ಸಂಘದ ಆಡಳಿತ ಮಂಡಳಿ ಸದಸ್ಯರ ಶ್ರಮ, ಸಿಬ್ಬಂದಿ ವರ್ಗದವರ ಕಾರ್ಯಶೀಲತೆ, ಸದಸ್ಯರ ಮತ್ತು ಗ್ರಾಹಕರ ಪ್ರೋತ್ಸಾಹ, ಠೇವಣಿದಾರರ ವಿಶ್ವಾಸಾರ್ಹತೆ, ಸಾರ್ವಜನಿಕರ ನಂಬಿಕೆಯಿಂದಾಗಿ ಈ ಸಂಘವು ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ತಿಳಿಸಿ, ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಕಳೆದ ಸಾಲಿನ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಲೀಲ್ ಅಹ್ಮದ್ ಅವರು ಸಭೆಗೆ ಮಂಡಿಸಿದರು. ಪರಿಶೋಧಿತ ಲೆಕ್ಕ ಪತ್ರವನ್ನು ಸಂಘದ ಕ್ಯಾಷಿಯರ್ ಶ್ರೀಮತಿ ಪಿ.ಆರ್. ದಿವ್ಯಶ್ರೀ ಓದಿದರು.

ಸಂಘದ ನಿರ್ದೇಶಕರುಗಳಾದ ರವೀಂದ್ರ ಎಸ್. ಶೆಟ್ಟಿ, ಡಾ. ಸುಬೋದ್ ಶೆಟ್ಟಿ, ಕೆ. ಮೋಹನ್ ದಾಸ್ ಶೆಟ್ಟಿ, ಶ್ರೀಮತಿ ಆಶಾ ಕುಶಾಲ್ ಶೆಟ್ಟಿ, ಶ್ರೀಮತಿ ವಿಮಲಾ ಎಸ್. ಶೆಟ್ಟಿ, ಹೆಚ್.ಎನ್. ವೆಂಕಟೇಶ್, ವಿಶೇಷ ಆಹ್ವಾನಿತರಾದ ಬಿ. ಸದಾಶಿವಶೆಟ್ಟಿ, ಅರುಣ್‌ಕುಮಾರ್ ಶೆಟ್ಟಿ, ಡಾ. ಸುರೇಶ್ ಶೆಟ್ಟಿ, ಎಂ. ಪ್ರಭಾಕರ್ ಶೆಟ್ಟಿ, ಕಿಶನ್ ಚಂದ್ರಶೆಟ್ಟಿ, ಹಿರಿಯ ಸಲಹೆಗಾರರಾದ ಎಸ್. ಸೀತಾರಾಮ ಶೆಟ್ಟಿ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂತೋಷ್ ಅವರ ಪ್ರಾರ್ಥನೆ ನಂತರ ಸಂಘದ ನಿರ್ದೇಶಕ ದಿನೇಶ್ ಕೆ. ಶೆಟ್ಟಿ ಸ್ವಾಗತಿಸಿದರು. ಡಾ. ನಿತೇಶ್ ರಾಜ್ ಶೆಟ್ಟಿ ವಂದಿಸಿದರು.

ಸಂಘದ ಸಿಬ್ಬಂದಿ ವರ್ಗದವರಾದ ಲೆಕ್ಕಾಧಿಕಾರಿ ಶ್ರೀಮತಿ ಬಿ. ಮಮತಾ, ಲೆಕ್ಕ ಸಹಾಯಕರಾದ ಕು. ಸುಮನ್ ಶೆಟ್ಟಿ, ಸಹಾಯಕರುಗಳಾದ ಡಿ.ಪಿ. ಯೋಗೇಶ್, ಪಿ. ಮುರುಳಿ ಕಾರ್ತಿಕ್ ಅವರುಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

ಪಿಗ್ಮಿ ಸಂಗ್ರಹಕಾರರಾದ ಹರೀಶ್ ಶೆಟ್ಟಿ, ಹೆಚ್. ಜಯಕರ ಶೆಟ್ಟಿ, ಸಿ. ವಾಮದೇವಯ್ಯ, ಜಿ.ಎಂ. ಭರಮಪ್ಪ, ಡಿ.ಪಿ. ರಮೇಶ್, ಡಿ.ಸಿ. ರಮೇಶ್, ಎ.ಎನ್. ಶಿವಕುಮಾರ್, ಅಮರಯ್ಯ ಹಿರೇಮಠ, ಕೆ ಆರೀಫುಲ್, ಬಿ. ಹನುಮೇಶ್ ಅವರುಗಳು ಕಾರ್ಯಕ್ರಮದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದರು.

# 'ನಮ್ಮ ನಡೆ ಬೆಳಗಾವಿ ಕಡೆಗೆ' ಪಕ್ಷಾತೀತ ಸಮಾವೇಶಕ್ಕೆ ಬನ್ನಿ

## ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್‌ನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಹೆಚ್.ಎಂ. ರೇವಣ್ಣ



ದಾವಣಗೆರೆ, ಸೆ. 24- ಪಕ್ಷಾತೀತವಾಗಿ ಬೆಳಗಾವಿಯಲ್ಲಿ ಅಕ್ಟೋಬರ್ 2 ಮತ್ತು 3 ರಂದು ನಡೆಯುವ ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್‌ನ 9 ನೇ ವಾರ್ಷಿಕ ರಾಷ್ಟ್ರೀಯ ಪ್ರತಿನಿಧಿಗಳ ಮಹಾ ಸಮಾವೇಶ ಹಾಗೂ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಅಭಿನಂದನಾ ಸಮಾರಂಭಕ್ಕೆ ಜಿಲ್ಲೆಯಿಂದ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕುರುಬ ಸಮಾಜ ಬಂಧುಗಳು ಪಾಲ್ಗೊಳ್ಳುವಂತೆ ಮಾಜಿ ಸಚಿವರೂ, ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ಎಂ. ರೇವಣ್ಣ ಕರೆ ನೀಡಿದರು.

ನಗರದ ಗುರುಭವನದಲ್ಲಿ ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್ ವತಿಯಿಂದ ನಡೆದ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಕಾಗಿನೆಲೆ ಗುರುಪೀಠದ ಪೀಠಾಧಿಪತಿಗಳು, ಮುಖ್ಯಮಂತ್ರಿ ಸಿದ್ಧರಾಮಯ್ಯ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಜೆಡಿಎಸ್ ಮುಖಂಡ ಬಂಡೆಪ್ಪ ಕಾಶಂಪೂರ್ ಸೇರಿದಂತೆ ವಿವಿಧ ಪಕ್ಷಗಳ ರಾಜ್ಯ ಹಾಗೂ ಹೊರ ರಾಜ್ಯಗಳ ಜನಪ್ರತಿನಿಧಿಗಳು ಆಗಮಿಸಲಿದ್ದಾರೆ. ಇದೊಂದು ಪಕ್ಷಾತೀತ ಮತ್ತು ಐತಿಹಾಸಿಕ ಸಮಾವೇಶ ಆಗಲಿದೆ ಎಂದರು.

ಇಡೀ ಭಾರತದಾದ್ಯಂತ ಇರುವ ಕುರುಬ ಸಮುದಾಯವನ್ನು ಒಂದೇ ಸೂರಿನಡಿ ತರುವ ಮತ್ತು ಸಂಘಟಿಸುವ ಪ್ರಯತ್ನ ಈ ಸಮಾವೇಶದ ಮೂಲಕ ನಡೆಯಲಿದೆ. ಬೆಳಗಾವಿಯಲ್ಲಿ ಅಕ್ಟೋಬರ್ 2 ಮೊದಲ ದಿನದ ಅಧಿವೇಶನದಲ್ಲಿ ಸಮುದಾಯದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಕುರುಬ ಸಮುದಾಯಕ್ಕೆ ಎಸ್ಟಿ ಮೀಸಲಾತಿ ಕಲ್ಪಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದು, ಈ ಬೇಡಿಕೆ ಸೇರಿದಂತೆ ಪ್ರಮುಖ 11 ಬೇಡಿಕೆಗಳ ಬಗ್ಗೆ ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಕ್ಟೋಬರ್ 3 ರಂದು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಜನಪರ ಆಡಳಿತ ನಡೆಸುತ್ತಿರುವ ಸಿದ್ಧರಾಮಯ್ಯ ಅವರಿಗೆ ರಾಷ್ಟ್ರೀಯ ಸನ್ಮಾನ ಏರ್ಪಡಿಸಲಾಗಿದೆ ಎಂದರು.

**ಸಮಾಜ ಸಂಘಟನೆ ಸಮಾವೇಶದ ಉದ್ದೇಶ :** ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಬೆಳಗಾವಿ ಸಮಾವೇಶದ ಪ್ರಮುಖ ಉದ್ದೇಶ ಸಮಾಜ ಸಂಘಟಿಸುವುದಾಗಿದೆ. ತನ್ಮೂಲಕ ಸಮುದಾಯಕ್ಕೆ ಅಗತ್ಯ ಸೌಲಭ್ಯ ಪಡೆಯಲು ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು. ಭ್ರಷ್ಟರಹಿತ, ಸ್ವಚ್ಛ ಆಡಳಿತ ನೀಡುತ್ತಿರುವ ಸಿದ್ದರಾಮಯ್ಯ ಅವರಿಗೆ ಮತ್ತಷ್ಟು ಶಕ್ತಿ ತುಂಬುವ ಕೆಲಸವನ್ನು ಮಾಡಬೇಕಾಗಿದೆ ಎಂದರು.

**ಎಲ್ಲರ ನಡೆ ಬೆಳಗಾವಿ ಕಡೆ :** ಶೆಫರ್ಡ್ಸ್ ಇಂಡಿಯಾ ಇಂಟರ್‌ನ್ಯಾಷನಲ್ ರಾಜ್ಯ ಉಪಾಧ್ಯಕ್ಷ ಬಾಬು ಜಿದ್ದಿಮನಿ ಮಾತನಾಡಿ, ರಾಜಕೀಯವಾಗಿ ಶಕ್ತಿ ತುಂಬುವ ಕೆಲಸವನ್ನು ಸಮಾವೇಶದ ಮೂಲಕ ಮಾಡಲಾಗುವುದು. ದೆಹಲಿ ಕೆಂಪುಕೋಟೆ ಮೇಲೆ ಕಂಬಳಿ ಬೀಸುವ ಆಶಯ ಕೂಡ ಹೊಂದಿದ್ದು, ಈ ಹಿನ್ನೆಲೆಯಲ್ಲಿ 'ಎಲ್ಲರ ನಡೆ ಬೆಳಗಾವಿ ಕಡೆ' ಎಂದು ಹೇಳಿದರು.

**'ಕುರುಬ' ಅಭ್ಯರ್ಥಿಗೆ ಟಿಕೆಟ್ ಘೋಷಿಸಲಿ :** ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ. ವಿನಯ್‌ಕುಮಾರ್ ಮಾತನಾಡಿ, ಬಾರಿ ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಕುರುಬ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ಘೋಷಣೆ ಮಾಡುವಂತೆ ಮನವಿ ಮಾಡಿದ ಅವರು ಸಮಾಜದ ಅಭ್ಯರ್ಥಿ ಪರ ಕೆಲಸ ಮಾಡಲಾಗುವುದು. ರಾಜಕೀಯವಾಗಿ ಸಮಾಜ ಇನ್ನೂ ಬೆಳೆಯಬೇಕಾಗಿದೆ ಎಂಬ ಆಶಯ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎಸ್. ರಾಮಪ್ಪ, ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ಅಧ್ಯಕ್ಷ ಸಿ.ಎಂ. ನಾಗರಾಜ್, ಖಜಾಂಚಿ ಡಾ. ಎಂ. ಜಯಪ್ಪ, ಇನ್‌ಸೈಟ್ಸ್‌ನ ಜಿ.ಬಿ. ವಿನಯ್ ಕುಮಾರ್, ಮಹಿಳಾ ವಿಭಾಗದ ಅಧ್ಯಕ್ಷೆ ಎಂ.ಹೆಚ್. ಪ್ರೇಮಲತಾ, ಬಿಳಿಚೋಡು ಶಿವಕುಮಾರ್ ಒಡೆಯರ್, ಚಿದಾನಂದ್ ಒಡೆಯರ್ ಮಾತನಾಡಿದರು.

ಚಿತ್ರದುರ್ಗದ ಕುಮಾರಗೌಡ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ವಿಶ್ರಾಂತ ಪ್ರಾಚಾರ್ಯ ಡಾ.ನಾ. ಲೋಕೇಶ್ ಒಡೆಯರ್, ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಸದಸ್ಯ ಜೆ.ಎನ್. ಶ್ರೀನಿವಾಸ್, ಜಿ.ಸಿ.ನಿಂಗಪ್ಪ, ಲೋಕಿಕೆರೆ ಸಿದ್ದಪ್ಪ, ರೂಪ, ಹೆಚ್.ಬಿ. ಪರಶುರಾಮಪ್ಪ, ಎಸ್. ಎಸ್. ಗಿರೀಶ್, ವಕೀಲರಾದ ಲಕ್ಕಪ್ಪ, ಪತ್ರಕರ್ತ ಟಿ.ಎನ್. ಮಧುಕರ್ ತುಮಕೂರು, ಸುನಂದಮ್ಮ ಮತ್ತಿತರರು ಭಾಗವಹಿಸಿದ್ದರು.

### ಕುರುಬರಿಗೆ ದಾವಣಗೆರೆಯಿಂದ ಟಿಕೆಟ್ ನೀಡಲು ಒತ್ತಾಯ

ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಹಿಂದುಳಿದ ಕುರುಬ ಸಮುದಾಯಕ್ಕೆ ಟಿಕೆಟ್ ಕೊಡಲು ಇಡೀ ಸಮುದಾಯದ ಪರವಾಗಿ ಹೆಚ್.ಎಂ. ರೇವಣ್ಣ ಆಗ್ರಹಿಸಿದರು.

ಚನ್ನಯ್ಯ ಒಡೆಯರ್ ನಂತರ ದಾವಣಗೆರೆ ಲೋಕಸಭೆ ಕ್ಷೇತ್ರ ಕುರುಬ ಸಮಾಜದ ಕೈ ತಪ್ಪಿ ಹೋಗಿದೆ. ಈ ಬಾರಿ ಕುರುಬ ಸಮಾಜದ ಅಭ್ಯರ್ಥಿಗೆ ಟಿಕೆಟ್ ನೀಡಬೇಕೆಂದು ವರಿಷ್ಠರಲ್ಲಿ ಮನವಿ ಮಾಡಿರುವುದಾಗಿ ತಿಳಿಸಿದರು.

ಅದೃಷ್ಟ ಇದ್ದರೆ ಸಿದ್ಧರಾಮಯ್ಯ ಕೂಡ ಪ್ರಧಾನಿ ಆಗಬಹುದು. ಲೋಕಸಭಾ ಚುನಾವಣೆಯನ್ನು ಗುರಿಯನ್ನಾಗಿಟ್ಟುಕೊಂಡು ನಾವು ಬೆಳಗಾವಿ ಸಮಾವೇಶ ಮಾಡುತ್ತಿಲ್ಲ. ಕಾಕತಾಳಿಯ ಎಂಬಂತೆ ಲೋಕಸಭಾ ಚುನಾವಣೆ ಕೂಡ ಸಮೀಪಿಸುತ್ತಿದೆ. ಆದರೆ ನಾವು ಸಿದ್ಧರಾಮಯ್ಯ ಅವರನ್ನು ಪ್ರಧಾನಿ ಮಾಡುವ ಉದ್ದೇಶದಿಂದ ಸಮಾವೇಶ ಮಾಡುತ್ತಿಲ್ಲ ಎಂದರು.

# ಎಸ್ಸೆಸ್ ಮುಖ್ಯಮಂತ್ರಿಯಾಗುವ ಯೋಗ ಎಸ್ಸೆಸ್ಸೆಂಗೆ ಬರಲಿ



### ಕೇದಾರ ಶ್ರೀಗಳ ಆಶೀರ್ವಾದ

ದಾವಣಗೆರೆ, ಸೆ.24- ಶ್ರೀ ಹಿಮವತ್ಕೇದಾರ್ ವೈರಾಗ್ಯ ಪೀಠದ ನಿಧಿ ರಾವಲ್ ಪದವಿ ವಿಭೂಷಿತ ಶ್ರೀ 1008 ಜಗದ್ಗುರು ಭೀಮಾಶಂಕರಲಿಂಗ ಭಗವತ್ಪಾದರು ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ನಿವಾಸದಲ್ಲಿ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆಯನ್ನು ನೆರವೇರಿಸಿದರು.

ಸುಮಾರು 5 ತಾಸುಗಳ ಕಾಲ ನಡೆದ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ನಂತರ ಶಾಮನೂರು ಕುಟುಂಬದವರು ಜಗದ್ಗುರುಗಳ ಪಾದಪೂಜೆಯನ್ನು ನೇರವೇರಿಸಿದರು.

ನಂತರ ಜಗದ್ಗುರುಗಳು ಆಶೀರ್ವಚನ ನೀಡುತ್ತಾ ಈ ಹಿಂದೆ ಶಾಮನೂರು ಶಿವಶಂಕರಪ್ಪ ಅವರು ಮುಖ್ಯಮಂತ್ರಿಗಳು ಆಗಬೇಕಿತ್ತು. ಆದರೆ, ಕೆಲವು ಕಾರಣಗಳಿಂದ ಸಾಧ್ಯವಾಗಲಿಲ್ಲ. ಮುಂದಿನ ದಿನಗಳಲ್ಲಿ ಆ ಯೋಗ ಮಗ ಮಲ್ಲಿಕಾರ್ಜುನ್ ಅವರಿಗೆ ಸಿಗಲಿ ಎಂದು ಆಶೀರ್ವದಿಸಿದರು.

ಎಸ್ಸೆಸ್ ಅವರಾಗಲೀ, ಎಸ್ಸೆಸ್ಸೆಂ ಅವರಾಗಲೀ ಈ ಭಾಗದಲ್ಲಿ ಕೇವಲ ರಾಜಕೀಯ ಕ್ಷೇತ್ರಕ್ಕೆ ಮಾತ್ರ ಸೀಮಿತರಾಗಿ ಕೆಲಸ ಮಾಡುತ್ತಿಲ್ಲ. ಶೈಕ್ಷಣಿಕ, ಸಾಮಾಜಿಕ, ಆರೋಗ್ಯ ಕ್ಷೇತ್ರಗಳಲ್ಲೂ ಕೆಲಸ ಮಾಡುತ್ತಿದ್ದು, ಅವರ ಸೇವೆ ಬೆಂಗಳೂರಿಗೆ ಸೀಮಿತಗೊಳ್ಳದೇ ದೆಹಲಿಗೂ ಬರಲಿ ಎಂದು ಆಶಿಸಿದರು.

ಕೇದಾರ ದೇವಸ್ಥಾನದ ಪೂಜಾ ಕೈಂಕರ್ಯ ಮತ್ತು ಉಸ್ತುವಾರಿಯ ಬಗ್ಗೆ ಈ ಹಿಂದೆ ಆದ ಘಟನೆಯನ್ನು ಉಲ್ಲೇಖಿಸಿದ ಜಗದ್ಗುರುಗಳು ಏನೇ ಆದರೂ ಪೀಠದ ಪರಂಪರೆಗೆ ನಾವು ಯಾವ ತ್ಯಾಗಕ್ಕೂ ಸಿದ್ದ ಎಂದು ತಿಳಿಸಿ ದೇಶಕ್ಕೆ ಸಂವಿಧಾನವಿದೆಯೋ, ನಮ್ಮ ಪರಂಪರೆಗೂ ಸಂವಿಧಾನ ಇದೆ ಅದರಂತೆ ನಾವು ನಡೆದುಕೊಳ್ಳುತ್ತೇವೆ ಎಂದರು.

ತಪೋಕ್ಷೇತ್ರ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳ ಮಾತನಾಡಿ, ಕೇದಾರ ಜಗದ್ಗುರುಗಳ ದರ್ಶನವಲ್ಲ. ಕೇದಾರನಾಥ ದರ್ಶನ ಮಾಡಿಸಿದ ಕೆಲಸ ಮಲ್ಲಿಕಾರ್ಜುನ್ ಅವರು ಮಾಡಿದ್ದಾರೆ ಎಂದು ಶ್ಲಾಘಿಸಿದರು. ಪತ್ರಕರ್ತ ಶಿವಯೋಗಿ ಕಂಬಾಳಿಮಠ ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ಶಾಮನೂರು ಕುಟುಂಬದ ಎಲ್ಲಾ ಸದಸ್ಯರು, ಭಕ್ತ ವೃಂದದವರು ಭಾಗವಹಿಸಿದ್ದರು.

# ಸಹಕಾರ ಬ್ಯಾಂಕುಗಳು ಬಡ ಮಕ್ಕಳ ಶಿಕ್ಷಣಕ್ಕೆ ಸಾಲ ಕೊಡಲಿ

### ರಾಣೇಬೆನ್ನೂರಿನ ಶಾಸಕ ಪ್ರಕಾಶ್ ಕೋಳಿವಾಡ ಮನವಿ





ರಾಣೇಬೆನ್ನೂರು, ಸೆ. 24 - ಇವ ನಮ್ಮವ ಎನ್ನುವ ಬಸವತತ್ವದಂತೆ ಎಲ್ಲ ಸಮಾಜದವರಿಗೂ ಸಹಾಯ, ಸಹಕಾರ ನೀಡುತ್ತಿರುವ ಈ ಬ್ಯಾಂಕ್‌ನವರು ಬಡ ಮಕ್ಕಳ ಶಿಕ್ಷಣಕ್ಕೂ ಸಾಲ ನೀಡಿ ಬಡ ಮಕ್ಕಳ ಬದುಕಿಗೆ ನೆರವಾಗು ವಂತೆ ಆಡಳಿತ ಮಂಡಳಿಗೆ ಮನವಿ ಮಾಡಿದ ಶಾಸಕ ಪ್ರಕಾಶ್ ಕೋಳಿವಾಡ ಅವರು ಫೈಲಟ್ ಆಗುವ ಉತ್ಸಾಹಿ ಯುವಕರಿದ್ದರೆ ಅವರಿಗೆ ನೌಕರಿ ಕೊಡುವುದಾಗಿ ಹೇಳಿದರು.

ಶಾಸಕರು ಇಲ್ಲಿನ ಎಪಿಎಂಸಿ ಸಮುದಾಯ ಭವನದಲ್ಲಿ ಶ್ರೀ ಬಸವೇಶ್ವರ ಅರ್ಬನ್ ಬ್ಯಾಂಕ್ ಶತಮಾನದ ಸಂಭ್ರಮದಲ್ಲಿ ಸಮಾರಂಭ ಉದ್ಘಾಟಿಸಿ ಮಾತನಾಡುತ್ತಿದ್ದರು.

ಹಣಕಾಸು ಸಂಸ್ಥೆಗಳ ಸಾಲಗಾರರು ಸಮಯಕ್ಕೆ ಸರಿಯಾಗಿ ಹಣವನ್ನ ಮರುಪಾವತಿ ಮಾಡಿದರೆ ಆ ಸಂಸ್ಥೆಗಳು ಬಹಳ ದಿನ ಬದುಕುತ್ತವೆ. ಈ ಬ್ಯಾಂಕಿನ ಸಾಲಗಾರರು ಪ್ರಾಮಾಣಿಕವಾಗಿ ನಡೆದುಕೊಂಡಿದ್ದರಿಂದ ನೂರು ವರ್ಷಗಳ ಕಾಲ ಈ ಬ್ಯಾಂಕ್ ಜೀವಂತವಾಗಿದೆ.ಇದು ಈ ಬ್ಯಾಂಕ್‌ನ ಸಾಧನೆಯ ಮೈಲುಗಲ್ಲು. ಇದನ್ನು ಕಟ್ಟಿದ ಮಹನೀಯರು ಸ್ಮರಣೀಯರು ಎಂದು ಶಾಸಕ ಪ್ರಕಾಶ ಹೇಳಿದರು.

ಮಾಜಿ ಶಾಸಕ ಅರುಣಕುಮಾರ, ಚನ್ನೇಶ ಸೌಹಾರ್ದ ಅಧ್ಯಕ್ಷ ಕೆ.ಶಿವಲಿಂಗಪ್ಪ, ಜಿಪಂ. ಮಾಜಿ ಅಧ್ಯಕ್ಷ ಎಸ್.ಎಸ್. ರಾಮಲಿಂಗಣ್ಣನವರ ವಾಣಿಜ್ಯ ಸಂಸ್ಥೆ ಮಾಜಿ ಅಧ್ಯಕ್ಷ ವಿ.ಪಿ.ಲಿಂಗನಗೌಡ ಮಾತನಾಡಿದರು.

ಲಿಂಗನಾಯ್ಕನಹಳ್ಳಿ ವಿರಕ್ತ ಮಠದ ಚನ್ನವೀರ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಬ್ಯಾಂಕ್ ಅಭಿವೃದ್ಧಿ ವೃದ್ದಿಸಲಿ ಎಂದು ಶುಭಕೋರಿದರು.

ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರು ಸಹಕಾರಿ ಇಲಾಖೆಯ ಅಧಿಕಾರಿಗಳು. ನಿರ್ದೇಶಕ ಮಂಜುನಾಥ ಓಲೇಕಾರ ಸ್ವಾಗತಿಸಿದರು. ಅಧ್ಯಕ್ಷ ಸಿ.ಆರ್.ಅಸುಂಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ತರಳಬಾಳು ಮಠದ ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಸ್ವಾಮಿಗಳ ಶ್ರದ್ಧಾಂಜಲಿ ಸಮಾರಂಭಕ್ಕೆ ಸಿರಿಗೆರೆಗೆ ತೆರಳುತ್ತಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳಿಗ್ಗೆ ಬ್ಯಾಂಕ್‌ಗೆ ಆಗಮಿಸಿ ಸಮಾರಂಭ ಸ್ಮರಣೆಯ ಶಿಲಾಫಲಕವನ್ನ ಉದ್ಘಾಟಿಸಿ ದರು. ಮಾಜಿ ಶಾಸಕ ಅರುಣಕುಮಾರ ಜೊತೆಗಿದ್ದರು.

# ಜಿ.ಎಂ. ಫಾರ್ಮಸಿ ಕಾಲೇಜಿನಲ್ಲಿ ವಾರ್ಷಿಕೋತ್ಸವ



ದಾವಣಗೆರೆ, ಸೆ. 24 - ಜಿ.ಎಂ. ಫಾರ್ಮಸಿ ಕಾಲೇಜಿನಲ್ಲಿ ವಾರ್ಷಿಕೋತ್ಸವ ಆಚರಿಸಲಾಯಿತು. ಕಾರ್ಯಕ್ರಮದ ಗೌರವ ಅತಿಥಿಗಳಾಗಿ ಜಿಎಂ ಸಮೂಹದ ಅಧ್ಯಕ್ಷ ಜಿ.ಎಂ. ಲಿಂಗರಾಜು ಅವರು ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿ.ಎಂ. ಸಮೂಹದ ನಿರ್ವಾಹಕ ಶಿವಕುಮಾರ್ ಹಾಗೂ ಜಿಎಂಐಟಿ ಪ್ರಾಂಶುಪಾಲ ಡಾ. ಸಂಜಯ್ ಪಾಂಡೆ ಉಪಸ್ಥಿತರಿದ್ದರು.

ಸಮಾರಂಭವನ್ನು ಉದ್ದೇಶಿಸಿ ಜಿ.ಎಂ. ಲಿಂಗರಾಜು ಮಾತನಾಡಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಬೆಳೆಸುವಲ್ಲಿ ನಮ್ಮ ಸಮೂಹ ಮತ್ತಷ್ಟು ಸೌಲಭ್ಯಗಳನ್ನು ಒದಗಿಸಲು ಯತ್ನಿಸುತ್ತಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಗಿರೀಶ್ ಬೋಳಕಟ್ಟಿ ಸಂಸ್ಥೆಯನ್ನು ಇನ್ನೂ ಉನ್ನತ ಮಟ್ಟಕ್ಕೆ ಬೆಳೆಸುವ ಭರವಸೆಯನ್ನು ನೀಡಿದರು. ಸಾಂಸ್ಕೃತಿಕ ಹಾಗೂ ಕ್ರೀಡಾ ಸಂಯೋಜಕ ಕೆ.ಯಸ್. ಕೇಶ್ವ, ಮೊಹಮ್ಮದ್ ಯುಸುಫ್ ದಮನಿ ,ರಾಕೇಶ್ ಎಸ್.ಎ ಹಾಗೂ ಎಂ. ಅಲಿಶಾ ಜೈನ್ ಭಾಗವಹಿಸಿದ್ದರು.

## ಮಲೇಬೆನ್ನೂರಿನಲ್ಲಿ ಇಂದು ಟ್ರ್ಯಾಕ್ಟರ್ ಮೆರವಣಿಗೆ

ಭದ್ರಾ ಬಲದಂಡೆ ನಾಲೆಗೆ ಸತತವಾಗಿ ನೀರು ಹರಿಸುವಂತೆ ಒತ್ತಾಯಿಸಿ, ಮಲೇಬೆನ್ನೂರಿನಲ್ಲಿ ಕಳೆದ 5 ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ಹರಿಹರ ತಾಲ್ಲೂಕಿನ ರೈತರು ಇಂದು ಬೆಳಿಗ್ಗೆ 11 ಗಂಟೆಗೆ ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ದೇವಸ್ಥಾನದಿಂದ ಮಲೇಬೆನ್ನೂರಿನ ನಾಡ ಕಚೇರಿವರೆಗೆ ಟ್ರ್ಯಾಕ್ಟರ್‌ಗಳ ಮೆರವಣಿಗೆ ನಡೆಸಿ, ನಂತರ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸುವ ಚಳುವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ರೈತ ಮುಖಂಡ ಮುದೇಗೌಡ್ರ ತಿಪ್ಪೇಶ್ ತಿಳಿಸಿದ್ದಾರೆ.


**ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ದೊಡ್ಡಬಾತಿ, ದಾವಣಗೆರೆ ಜಿಲ್ಲೆ**

**ಸಂಘದ 2022-23ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ನೋಟಿಸ್**

ಕಾರ್ಖಾನೆಯ 2022-23ನೇ ಸಾಲಿನ 54ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ : 25.09.2023ರಂದು ಸೋಮವಾರ ಬೆಳಿಗ್ಗೆ 11.30 ಗಂಟೆಗೆ ಕಾರ್ಖಾನೆಯ ಆವರಣದಲ್ಲಿ ಕಾರ್ಖಾನೆಯ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಮಾನ್ಯ ಹೆಚ್.ಎಸ್. ಶಿವಶಂಕರ್‌ರವರು ಇವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರುಗಳು ಸಭೆಗೆ ಹಾಜರಾಗಿ ಯಶಸ್ವಿಗೊಳಿಸಬೇಕಾಗಿ ವಿನಂತಿಸಲಾಗಿದೆ.

ಆಡಳಿತ ಮಂಡಳಿ ಪರವಾಗಿ

ಸಹಿ/- (ಹೆಚ್. ಅನ್ನಪೂರ್ಣ), ವ್ಯವಸ್ಥಾಪಕ ನಿರ್ದೇಶಕರು

**WANTED/ಕೆಲಸಕ್ಕೆ ಬೇಕಾಗಿದ್ದಾರೆ**

Wholesale ಔಷಧಿ ಅಂಗಡಿಗೆ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.

Qualification : (SSSLC, PUC) English ಓದಲು ಬರಬೇಕು

ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಸೇಲ್ಸ್ ಮ್ಯಾನೇಜರ್ ಬೇಕಾಗಿದ್ದಾರೆ.

Qualification : (Any Degree)

Address : ಎ.ಕೆ. ಫಾರ್ಮಾ, ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.

ಫೋ : 88678 56784, 99643 75596

**ಜನ್ಮ ದಿನದ ಶುಭಾಶಯಗಳು**

ಇಂದು ಜನ್ಮ ದಿನದ ಸಂಭ್ರಮದಲ್ಲಿರುವ ಶ್ರೀ ಸ್ವಾಮಿ ವಿವೇಕಾನಂದ ಗೆಳೆಯರ ಬಳಗದ ಅಧ್ಯಕ್ಷರೂ, ಲಯನ್ಸ್ ಕ್ಲಬ್ ಸದಸ್ಯರು, ಮಾರುತಿ ಸೇವಾ ಸಮಿತಿ ಕಾರ್ಯದರ್ಶಿಗಳೂ, 10ನೇ ವಾರ್ಡಿನ ಬಿಜೆಪಿ ಬೂತ್ ಅಧ್ಯಕ್ಷರೂ, ಆತ್ಮೀಯರೂ ಆದ

**ಶ್ರೀ ಎರ್ರಿಸ್ವಾಮಿ**

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ, ಐಶ್ವರ್ಯ, ಸುಖ, ಶಾಂತಿ, ನೆಮ್ಮದಿ ನೀಡಲೆಂದು ಶುಭ ಹಾರೈಸುತ್ತೇವೆ...



**ಎರ್ರಿಸ್ವಾಮಿ ಗೆಳೆಯರ ಬಳಗ**

ದಾವಲ್ ಪೇಟೆ, ದಾವಣಗೆರೆ.



**ಹುಟ್ಟು ಹಬ್ಬದ ಶುಭಾಶಯಗಳು**

ರಾಜ್ಯ ಸರ್ಕಾರದ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಇಲಾಖೆ ಸಚಿವರೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್** ಇವರಿಗೆ ಜಂಗಮ ಸೌಹಾರ್ದ ಸಹಕಾರಿ ನಿಯಮಿತ ವತಿಯಿಂದ ಹುಟ್ಟು ಹಬ್ಬದ ಶುಭಾಶಯಗಳು.

**ಜಂಗಮ ಸೌಹಾರ್ದ ಸಹಕಾರಿ ನಿಯಮಿತ**

#477/2, ಪ್ರಿಯ ಕಾಂಪ್ಲೆಕ್ಸ್, 16ನೇ ಕ್ರಾಸ್, ಕೆ.ಟಿ.ಜೆ ನಗರ, ಹದಡಿ ರಸ್ತೆ, ದಾವಣಗೆರೆ. ಫೋ. : 08192 233666

**13 ನೇ ವಾರ್ಷಿಕ ಮಹಾಸಭೆ**

ನಮ್ಮ ಸಹಕಾರಿಯ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ ದಿನಾಂಕ 25.09.2023ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪ, ಎ.ವಿ.ಕೆ ಕಾಲೇಜು ಎದುರು, ಅಕ್ಕಮಹಾದೇವಿ ರಸ್ತೆ, ದಾವಣಗೆರೆ ಇಲ್ಲಿ ನಡೆಯಲಿದ್ದು, ಈಗಾಗಲೇ ಆಹ್ವಾನ ಪತ್ರಿಕೆಯನ್ನು ಕಳುಹಿಸಿದೆ. ಒಂದು ವೇಳೆ ತಲುಪದೇ ಇದ್ದಲ್ಲಿ ಸದಸ್ಯರುಗಳು ಇದನ್ನೇ ಆಹ್ವಾನವೆಂದು ತಿಳಿದು ಸಭೆಗೆ ಹಾಜರಾಗಲು ಕೋರಿದೆ.

ಆಡಳಿತ ಮಂಡಳಿಯ ಪರವಾಗಿ

ಸಹಿ/- (ಶ್ರೀ ಎನ್.ಎಂ. ಬಸವರಾಜಯ್ಯ) ಅಧ್ಯಕ್ಷರು

ವಿಶೇಶ ಸೂಚನೆ : ಆಹ್ವಾನ ಪತ್ರಿಕೆ ತಲುಪೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

